# ಅಪರಂಜಿ

ತಿಳಿನಗೆಯ ಕಾರಂಜಿ



ಫೆಬ್ರವರಿ - 2013





ಮೊದಲೆಲ್ಲಾ ಮೇಲ್ ಬಾಗಿಲಿಗೆ ಬರ್ತಾ ಇತ್ತು.
ಈಗ ಟೇಬಲ್‌ಗೇ ಬರುತ್ತೆ....

# ಅಪರಂಜಿ



ತಿಳಿನಗೆಯ ಕಾರಂಜಿ

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ



**ಸಂಪುಟ 30**
**ಸಂಚಿಕೆ – 5**
**ಫೆಬ್ರವರಿ – 2013**

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಒಂದು ಹನಿ ಕಣ್ಣೀರು | **ಗೌರಿ ಮಿರ್ಲೆ ಅಚಂತಾ** | 6 |
| ಈ-ಮೇಲ್ ಕವನಗಳು | **ಎಚ್. ಡುಂಡಿರಾಜ್** | 8 |
| ಸ್ಲೋ ಮೇಲ್ ವರ್ಸಸ್.... | **ಇ.ಆರ್. ರಾಮಚಂದ್ರನ್** | 10 |
| ನಾ ಮೇಲೋ ನೀ...... | **ಅನಿತಾ ನರೇಶ್ ಮಂಚಿ** | 13 |
| ಅಡಗೂಲಜ್ಜಿ.... | **ಸಿ.ಆರ್. ಸತ್ಯ** | 15 |
| ಆ ಮೇಲ್ ಈ ಮೇಲ್... | **ಎಂ.ಕೆ. ಭಾಸ್ಕರರಾವ್** | 19 |
| ಹರಿಯುವ ಹಣದ... | **ಆನಂದ** | 23 |
| ತುಂತುರು | **ದಂನಆ** | 26 |
| ಹಸಿರಾಗದ ನನ್ನ ಹಸಿರು.. | **ನಂದಿನಿ ಕಾಪಡಿ** | 27 |
| ಕಸ ಆನ್ ಲೈನ್ | **ಆರತಿ ಘಟಿಕಾರ, ದುಬೈ** | 30 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 33 |
| ಜುಗ್ಗಾನಂದ ಸ್ವಾಮಿ | **ಬೇಲೂರು ರಾಮಮೂರ್ತಿ** | 36 |

**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**

*ಮುದ್ರಣ:* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ:* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



''ಪತ್ನಿ ಹೆಸರಿನಲ್ಲಿ ಪುರುಷರ ರಾಜಕೀಯ'' – ಹೇಳಿಕೆ

**● ಅವರನ್ನೆಲ್ಲಾ ಒಲೆ ಮುಂದೆ ಕೂರಿಸಬೇಕು !!**

★★★

''ಬೆಂಬಲಿಗರನ್ನೆಲ್ಲಾ ಒಟ್ಟಿಗೆ ಕೈಬಿಡಲಿ'' – ಶ್ರೀ ಬಿ.ಎಸ್.ವೈ.

**● ಇದು ಆಶ್ವಾಸನೆಯೋ, ಬೆದರಿಕೆಯೋ ?!**

★★★

''ಅಮೆರಿಕೆಯಲ್ಲಿ ತಪ್ಪಿದ ವಿತ್ತೀಯ ಪ್ರಪಾತ'' – ಶೀರ್ಷಿಕೆ

**● Fiscal Cliff ಅಂದರೆ ಸುಲಭವಾದೀತೇನೋ !!**

★★★

''ಡೇವಿಸ್ ಕಪ್ ಆಟಗಾರರ ಬಂಡಾಯ'' – ಕ್ರೀಡಾಸುದ್ದಿ

**● "Love All" ಅನ್ನೋದನ್ನ ಅವರೆಲ್ಲ ಮರೆತಿದ್ದಾರೆ !!**

★★★

ಭಾಗವತ್, ಒವೈಸಿ ಒಂದೇ ನಾಣ್ಯದ ಎರಡು ಮುಖಗಳು – ಹೇಳಿಕೆ

**● ಸವಕಲು ನಾಣ್ಯ ಅಲ್ಲತಾನೆ !!**

★★★

ಕಾವೇರಿ ನೀರು: ಆತಂಕಪಡುವ ಅಗತ್ಯವಿಲ್ಲ – ಶ್ರೀ ಬೊಮ್ಮಾಯಿ

**● ಈ ತರಹದ ಹೇಳಿಕೆಗಳಿಂದಲೇ ಆತಂಕ !!**

★★★

ತಮ್ಮ ಪ್ರತಿಮೆಯ ಬಗ್ಗೆ ನಡೆಯುತ್ತಿರುವ ವಿರೋಧದಿಂದ ಶ್ರೀ ಅಂಬೇಡ್ಕರ್ ಅವರಿಗೆ ಎಷ್ಟು ಬೇಜಾರಾಗಿದೆಯೋ !!

★★★

ಚುನಾವಣೆಯಲ್ಲಿ ಮದ್ಯದ ಹೊಳೆ ಹರಿಯದಿರಲಿ – ಮಠಾಧಿಪತಿಗಳು

**● ಅವರಿಗೆ ಇದು ಹೊಳೆದದ್ದೇ ಆಶ್ಚರ್ಯಕರ !!**

★★★

# ನಮ್ಮ ನಿಮ್ಮಲ್ಲಿ

**ಔ**ಡೆನ್ ಒಬ್ಬ ಅಮೆರಿಕನ್ ಕವಿ. ಈತ ''ಫ್ಯೂನೆರಲ್ ಬ್ಲೂಸ್'' ಎಂಬ ಕವನವೊಂದನ್ನು ಬರೆದಿದ್ದಾನೆ. ನಾಟಕದ ದೃಶ್ಯವೊಂದಕ್ಕೆ ಹೊಂದಿಸಿ ರಚಿಸಿದ ಕವನವಿದು. ಒಬ್ಬ ಜನಪ್ರಿಯ ರಾಜಕೀಯ ಧುರೀಣನ ಅಂತ್ಯವನ್ನು ಶೋಕಿಸುವ ಸಂದರ್ಭವನ್ನು ಈ ಸಾಲುಗಳು ಬಹು ಆಪ್ತತೆಯಿಂದ ಬಿಂಬಿಸುತ್ತವೆ. ನಮ್ಮ ನಿರ್ಭಯ ಮೊನ್ನೆ ಮೃಗಶಿರಗಳ ಗುಂಪಿನಲ್ಲಿ ಸಿಕ್ಕಿಬಿದ್ದು ಹುತಾತ್ಮಳಾದಾಗ ನನಗೆ ಈ ಸಾಲುಗಳು ತಾವಾಗಿಯೇ ನೆನಪಿಗೆ ಬಂದವು.

Stop all the clocks, cut off the telephone,
Prevent the dog from barking with a juicy bone,
Silence the pianos and with muffled drum
Bring out the coffin, let the mourners come.

Let aero planes circle moaning overhead
Scribbling on the sky the message She is Dead,
Put crepe bows round the white necks of the public doves,
Let the traffic policemen wear black cotton gloves.

The stars are not wanted now: put out every one;
Pack up the moon and dismantle the sun;
Pour away the ocean and sweep up the wood.
For nothing now can ever come to any good.

ನಿರ್ಭಯಳ ಈ ಹತ್ಯೆಗೆ ನಮ್ಮ ಸಮಾಜದ, ಅಂದರೆ ನಮ್ಮ ನಿಮ್ಮೆಲ್ಲರ ಹೊಣೆಗಾರಿಕೆ ಎಷ್ಟಿರಬಹುದು ಎಂಬ ಪ್ರಶ್ನೆ ಆಗಿನಿಂದ ನನ್ನನ್ನು ಕಾಡುತ್ತಿದೆ. ಸಮಾಜದಲ್ಲಿನ ಅತ್ಯಂತ ಹೀನಾಯವಾದ ಬಡತನದಲ್ಲಿರುವ ವರ್ಗ ಮತ್ತು ಎಲ್ಲವನ್ನೂ ಖರೀದಿಸುವ ಮಾತನ್ನಾಡುವ ಸೂಪರ್ ಶ್ರೀಮಂತರ ವರ್ಗ, ಈ ಎರಡೂ ವರ್ಗಗಳು ಸಮಾಜದ ಬಗ್ಗೆ ತಮ್ಮ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಮರೆತು ಸ್ವೇಚ್ಛಾಚಾರದ ಹಾದಿಯನ್ನು ಹಿಡಿದಿವೆಯೇ? ಅಥವಾ ಒಂದು ಬಿಲಿಯನ್ ಜನಸಂಖ್ಯೆಯನ್ನು ಹೊಂದಿರುವ ದೇಶವನ್ನು

ಸಮರ್ಥವಾಗಿ ಆಳುವ ಶಕ್ತಿ ನಮ್ಮ ಡಿಎನ್‌ಎಗೆ ಮೀರಿದ ಸಾಮಗ್ರಿಯೇ? ಇದನ್ನೆಲ್ಲಾ ನಮ್ಮ ಅಕ್ಕನ ಮಗಳು ಗೌರಿಯೊಡನೆ ಚರ್ಚಿಸಿದಾಗ ಅವಳು ತನ್ನದೇ ಆದ ದೃಷ್ಟಿಕೋನವನ್ನು ನನ್ನ ಮುಂದಿಟ್ಟಳು. ''ಒಂದು ಹನಿ ಕಣ್ಣೀರು'' ಎಂಬ ಶೀರ್ಷಿಕೆಯ ಈ ಬರಹವನ್ನು ಮುಂದಿನ ಪುಟದಲ್ಲಿ ನೋಡಬಹುದು.

ಈ ಫೆಬ್ರವರಿ ಸಂಚಿಕೆಯ ಥೀಮ್ - ಈಮೇಯ್ಲ್ ಮತ್ತು ಎಸ್‌ಎಂಎಸ್. ನಮ್ಮ ದಿನವಹಿ ಜೀವನದಲ್ಲಿ ಮುಖ್ಯಪಾತ್ರವಹಿಸಿರುವ ಇವುಗಳ ಬಗ್ಗೆ ನಮ್ಮ ಬರಹಗಾರರ ಟೇಕ್ ಅನ್ನು ಓದಿ ಸಂತಸಪಡಿ.

ಕಳೆದ ವರ್ಷದ ಬೀಚಿಯವರ ಸಂಸ್ಮರಣೆಯ ಹಾಸ್ಯೋತ್ಸವ ಎಂದಿನ ವರ್ಷಗಳಂತೆ ಡಿಸೆಂಬರ್ 25ರಂದು ಜಯನಗರದ ಎಚ್.ಎನ್. ಕಲಾಕ್ಷೇತ್ರದಲ್ಲಿ ಜರುಗಿತು. ಬೆಳಗ್ಗೆ 10 ಗಂಟೆಗೆ ಪ್ರಾರಂಭವಾದ ಹಾಸ್ಯೋತ್ಸವ ಸಂಜೆ 6 ಗಂಟೆಯವರೆವಿಗೂ ಸತತವಾಗಿ ನಡೆಯಿತು. ಎಂದಿನಂತೆ ಹಾಸ್ಯಾಸಕ್ತರು ಕೂತು ತಮ್ಮ ಜಂಜಡಗಳಿಂದ ದೂರವಾಗಿ ಹಾಸ್ಯವನ್ನು ಸವಿದರು. ಹಾಸ್ಯೋತ್ಸವದ ನೆನಪಿಗಾಗಿ ಒಂದೆರಡು ಫೋಟೋಗಳನ್ನು ಅಪರಂಜಿ ತನ್ನ ಓದುಗರ ಮುಂದಿಡಲು ಸಂತೋಷಿಸುತ್ತದೆ.

**ನ್ಯಾಷನಲ್ ಎಜುಕೇಷನ್ ಸೊಸೈಟಿಯ ಅಧ್ಯಕ್ಷರಾದ ಡಾ|| ಎ.ಹೆಚ್. ರಾಮ ರಾವ್ ಅವರು ಹಾಸ್ಯೋತ್ಸವಕ್ಕೆ ಚಾಲನೆ ಕೊಡುತ್ತಿರುವುದು**







**ಹಾಸ್ಯೋತ್ಸವದ ವೇದಿಕೆಯಲ್ಲಿ ಅತಿಥಿ ಗಣ್ಯರು**



**ಹಾಸ್ಯೋತ್ಸವದ ಆನಂದ ಸವಿಯಲು ಸೇರಿರುವ ಜನ ಸಮೂಹ**

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಯ ದಿನಾಂಕವನ್ನು ನಾವು ಡಿಸೆಂಬರ್ 31ರ ವರೆಗೂ ವಿಸ್ತರಣೆ ಮಾಡಿದ್ದೆವು. ನಾಡಿನಾದ್ಯಂತ ಅನೇಕ ಹಾಸ್ಯ ಲೇಖನಗಳು ಬಂದಿವೆ. ಈಗ ಆ ಲೇಖನಗಳ ಅವಲೋಕನ ನಡೆಯುತ್ತಿದೆ. ಬಹುಮಾನಿತರ ಘೋಷಣೆ ಮತ್ತು ಬಹುಮಾನಿತ ಬರಹಗಳ ಪ್ರಕಟಣೆಯನ್ನು ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ. ನಮ್ಮ ಈ ಹಾಸ್ಯಲೇಖನ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಲೇಖಕ ಲೇಖಕಿಯರಿಗೆ ನಮ್ಮ ಅಭಿನಂದನೆಗಳು.

**ಶಿವಕುಮಾರ್**

## ಓದುಗರಲ್ಲಿ ಒಂದು ಕಳಕಳಿಯ ವಿನಂತಿ

ಪ್ರತ್ಯೇಕವಾಗಿ ಆಫೀಸು, ಸಿಬ್ಬಂದಿಯಿಲ್ಲದ ಪತ್ರಿಕೆ ಅಪರಂಜಿ. ನಮ್ಮ ವ್ಯವಹಾರವೆಲ್ಲಾ ಉಪಸಂಪಾದಕರ ಮನೆಯಿಂದಲೇ ಉಚಿತವಾಗಿ ನಡೆಯುತ್ತಿದೆ. ಉಪಸಂಪಾದಕರ ಈ ಔದಾರ್ಯಪೂರ್ಣ ಹಾಸ್ಯಾಭಿಮಾನಕ್ಕೆ ಅವರ ಮನೆಯವರೆಲ್ಲರ ಸಹಕಾರವಿರುವುದು ನಿಜ. ಮನೆಯವರ ಈ ಸೌಜನ್ಯದ ಎಲ್ಲೆಯನ್ನು ಮೀರದಿರುವ ಉದ್ದೇಶದಿಂದ ಈ ಸಲಹೆಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ. ನೀವು ನಮ್ಮನ್ನು ಸಂಪರ್ಕಿಸಬೇಕಾದಾಗ ಹಲವು ನಿಯಮಗಳನ್ನು ಪಾಲಿಸಿರೆಂದು ನಮ್ಮ ವಿನಮ್ರ ಮನವಿ. 1. ಭಾನುವಾರ ಬಿಟ್ಟು ಮಿಕ್ಕ ದಿನಗಳಲ್ಲಿ ಬೆಳಗ್ಗೆ 9 ಘಂಟೆಗೆ ಮುಂಚೆ ಸಂಪರ್ಕಿಸಿ. 2. ನಿಮ್ಮ ಕರೆಯನ್ನು ಯಾರು ಸ್ವೀಕರಿಸಿದರೂ ಉಪಸಂಪಾದಕರನ್ನು ಮಾತ್ರ ಕೇಳಿ ಅವರೊಂದಿಗೇ ವ್ಯವಹರಿಸಿ. ಸಹಜವಾಗಿ ಇತರರಿಗೆ ಈ ಭಾರ ಹೊರಿಸುವುದು ಅನಗತ್ಯ. 3. ಆದಷ್ಟು ಮಟ್ಟಿಗೆ ಎಸ್.ಎಮ್.ಎಸ್. ಬಳಸಿ ಅಥವಾ ಪೋಸ್ಟ್ ಕಾರ್ಡ್ ಕಳಿಸಿ ನಿಮ್ಮ ಅಭಿಪ್ರಾಯ ತಿಳಿಸಿ. ಈ ವಿಷಯದಲ್ಲಿ ತಮ್ಮ ಸಹಕಾರವನ್ನು ಅಪರಂಜಿ ಅಪೇಕ್ಷಿಸುತ್ತದೆ.

# ಒಂದು ಹನಿ ಕಣ್ಣೀರು

**- ಗೌರಿ ಮಿರ್ಲೆ ಅಚಂತಾ**

**ದೆ**ಹಲಿಯ ಘಟನೆ ನಡೆದಾಗ ನಾನು ಕೆಲಸದ ಮೇಲೆ ದೆಹಲಿಯಲ್ಲಿದ್ದೆ. ಯಾವುದೇ ಪೂರ್ವ ಸಿದ್ಧತೆಯಿಲ್ಲದೇ, ಯಾವ ರಾಜಕೀಯ ಪಕ್ಷಕ್ಕೂ ಒತ್ತೆಯಾಗಿಲ್ಲದ ಸಾವಿರಾರು ಜನರು ತಂಡ ತಂಡವಾಗಿ ಬೀದಿಗಿಳಿದು ಒಂದು ಶಿಷ್ಟ ಪ್ರಜಾಪ್ರಭುತ್ವದ ರೀತಿಯಲ್ಲಿ ತಮ್ಮ ಪ್ರತಿಭಟನೆಯನ್ನು ದಾಖಲಿಸಿದ್ದು ನೋಡಿ ನಿಜಕ್ಕೂ ನನ್ನ ಹೃದಯ ತುಂಬಿ ಬಂತು. ಆಶ್ಚರ್ಯವೆಂದರೆ ಇದು ದೆಹಲಿಗೆ ಮಾತ್ರ ಸೀಮಿತವಾಗಿರಲಿಲ್ಲ. ನಾಡಿನ ಅನೇಕ ಮುಖ್ಯ ಪಟ್ಟಣಗಳಲ್ಲಿ ಜನರು ಮೆರವಣಿಗೆ ಹೊರಟು ತಮ್ಮ ಅಂತಃಕರಣದ ಭಾವನೆಗಳಿಗೆ ಸಾಕ್ಷಿಯಾದರು. ಎಲ್ಲ ವಯಸ್ಸಿನ, ವಿವಿಧ ವೃತ್ತಿಗಳ, ವಿವಿಧ ಹಿನ್ನೆಲೆಗಳ ಹುಡುಗಿಯರು ಮತ್ತು ತರುಣರು ಒಕ್ಕೊರಲಿನಿಂದ ತಮ್ಮ ಅಸಮಾಧಾನ ವ್ಯಕ್ತಪಡಿಸುತ್ತಿದ್ದದ್ದನ್ನು ನಾನು ಕಣ್ಣಾರೆ ನೋಡಿದಾಗ, ನನಗೆ "ಭಲೇ, ನಾನು ನಿಜಕ್ಕೂ ಒಂದು ಮುಂದುವರಿದ ಸಂವೇದನಾಶೀಲ ಸಮಾಜದಲ್ಲಿ ಬದುಕುತ್ತಿದ್ದೇನೆ, ನಮ್ಮ ಪ್ರಜಾಪ್ರಭುತ್ವ ಪ್ರಬುದ್ಧವಾಗಿದೆ" ಅನ್ನಿಸಿದ್ದಂತೂ ನಿಜ.

ಈ ಘಟನೆಯ ಇನ್ನೊಂದು ಒಳ್ಳೆಯ ಫಲಶ್ರುತಿಯೆಂದರೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಅನೇಕ ತ್ವರಿತ ಕ್ರಮಗಳನ್ನು ಆಚರಣೆಗೆ ತಂದದ್ದು. ಈ ಕ್ರಮಗಳು ಪರಿಣಾಮಕಾರಿಯೋ ಅಲ್ಲವೋ ಎಂಬುದಕ್ಕಿಂತ ಜನರ ಅಭಿಪ್ರಾಯಗಳಿಗೆ ಸರ್ಕಾರ ತೋರಿದ ಕ್ಷಿಪ್ರ ಸಂವೇದನೆ ನನ್ನ ದೃಷ್ಟಿಯಲ್ಲಿ ಸ್ವಾಗತಿಸಬೇಕಾದ ಸಂಗತಿ. ಪ್ರಜಾಪ್ರಭುತ್ವ ಪರಿಣಾಮಕಾರಿಯಾಗಿ ನಡೆಯುತ್ತಿರುವುದಕ್ಕೆ ಇದು ಒಂದು ಸ್ಪಷ್ಟ ಸಂಕೇತ ಎಂಬುದು ನನ್ನ ತಿಳುವಳಿಕೆ. ಚುನಾವಣೆಗಳು ಇಲ್ಲದ ಸಮಯದಲ್ಲೂ ಈ ಬಗೆಯ ಸ್ಪಂದನ ನಮ್ಮ ವ್ಯವಸ್ಥೆಯ ಬಗ್ಗೆ ಹೊಸ ನಂಬಿಕೆಯನ್ನು ಹುಟ್ಟಿಸಬಲ್ಲುದು.

ನಮ್ಮ ಮಾಧ್ಯಮಗಳು ಅದರಲ್ಲೂ ದೃಶ್ಯ ಮಾಧ್ಯಮಗಳ ನಡವಳಿಕೆ ನನ್ನ ಅಭಿಪ್ರಾಯದಲ್ಲಿ ತೀರ ಶ್ಲಾಘನೀಯ. ಘಟನೆಯ ಎಲ್ಲ ಆಯಾಮಗಳನ್ನು ಮುಕ್ತವಾಗಿ ಆದರೆ ಅಪಚಾರವಾಗದ ಹಾಗೆ ಚರ್ಚಿಸಿ ಅನೇಕ ಹೊಸ ಚಿಂತನೆಗಳ ಉಗಮಕ್ಕೆ ನಾಂದಿ ಹಾಡಿದ್ದು ಈ ಮಾಧ್ಯಮ. ಸ್ವತಂತ್ರ ಮಾಧ್ಯಮವು ಪ್ರಜಾಪ್ರಭುತ್ವದ ಕಾವಲು ನಾಯಿ ಎನ್ನುತ್ತಾರೆ. ಈ ಬಾರಿ ಈ ಕಾವಲು ನಾಯಿ ಜೋರಾಗಿ ಬಿಡುವಿಲ್ಲದೇ ಬೊಗಳಿದ್ದನ್ನು ನೋಡಿದ್ದಾಯಿತು.

ಕೊನೆಯದಾಗಿ ಈ ಘಟನೆ ನಾಡಿನಾದ್ಯಂತ ಎಲ್ಲರ ಮನೆಗಳಲ್ಲೂ ಚರ್ಚೆಯ ವಿಷಯವಾಗಿದೆ. ಇದರಿಂದ ನಮ್ಮ ಯುವಜನತೆ ಇಂತಹ ವಿಷಯಗಳ ಬಗ್ಗೆ ಹೆಚ್ಚು ಸಂವೇದನೆಯನ್ನು ತೋರುವಂತೆ ಮಾಡುವ ಪ್ರಚೋದನೆಗೆ ಅವಕಾಶ ಸಿಕ್ಕಿದೆ.

ಅತ್ಯಾಚಾರ, ಕ್ರೌರ್ಯ ಎಲ್ಲ ಸಮಾಜಗಳಂತೆ ನಮ್ಮ ಸಮಾಜದಲ್ಲೂ ಅನಾದಿಕಾಲದಿಂದ ನಡೆದು ಬಂದಿದೆ. ನಮ್ಮ ಪ್ರಾಚೀನ ಕಾಲಕ್ಕೆ ಹೋಲಿಸಿದರೆ ನಾವು ಈಗ ಒಂದು ವ್ಯವಸ್ಥಿತ

ನಾಗರೀಕ ಸಮಾಜದಲ್ಲಿ ಬಾಳುತ್ತಿದ್ದೇವೆ. ಸುಧಾರಣೆಯಾಗಬೇಕಾದ್ದು ಸಾವಿರ ಅಂಶಗಳಿವೆ. ಅದನ್ನು ನಾನು ಮರೆತಿಲ್ಲ. ಆದರೂ ಒಬ್ಬ ಕಂಸ ಎಳೆಯ ಶಿಶುಗಳನ್ನು ಬಂಡೆಗೆ ಅಪ್ಪಳಿಸುವ, ನಾದಿರ್ ಷಾ ರುಂಡಗಳ ಗುಡ್ಡವನ್ನು ನಿರ್ಮಿಸುವ ಹಂತದಿಂದ ನಾವು ಬಹುದೂರ ಮುನ್ನಡೆದಿದ್ದೇವೆ. ಕೇವಲ ಇನ್ನೂರು ವರ್ಷಗಳ ಹಿಂದೆ ತರುಣಿ ವಿಧವೆಯರನ್ನು ಎಳೆದು ಬೆಂಕಿಗೆ ಹಾಕುವುದು, ಹೆಣ್ಣಿಗೆ ಯಾವ ವಿಧವಾದ ಸ್ವಾತಂತ್ರ್ಯವನ್ನೂ ನೀಡದಿರುವುದು ಸರ್ವೇ ಸಾಮಾನ್ಯವಾಗಿತ್ತು. ಈಗ ಹೆಣ್ಣಿನ ಸ್ಥಿತಿ (ದಕ್ಷಿಣ ಭಾರತದ ಮಟ್ಟಿಗಾದರೂ) ಬಹುವಾಗಿ ಬದಲಾಗಿದೆ.

ನಿರ್ಭಯಳ ಸಾವು ನನ್ನ ತಂಗಿಯ ಸಾವು. ಅವಳಿಗಾಗಿ ಸಂಕಟಪಟ್ಟವರ ಕಣ್ಣೀರಿನಲ್ಲಿ ನನ್ನ ಒಂದು ಹನಿಯೂ ಸೇರಿದೆ. ಆದರೆ ಈಗ ನಮ್ಮ ಮುಂದಿರುವ ಕೆಲಸ ಒಂದು ಸುಸಂಸ್ಕೃತ ನಾಗರೀಕ ಸಮಾಜವನ್ನು ಕಟ್ಟುವ ಕೆಲಸ. ಇದನ್ನು ಕೇವಲ ಸರ್ಕಾರ ಮತ್ತು ರಾಜಕಾರಣಿಗಳಿಗೆ ಬಿಡುವುದು ತೀರ ಪೆದ್ದುತನವಾಗುತ್ತದೆ. ನಾವೆಲ್ಲರೂ ಕೈಜೋಡಿಸಿ ಉತ್ಸಾಹದಿಂದ ಮಾಡಬೇಕಾದ ಮಹತ್ ಕಾರ್ಯ ಇದು. ಅಪರಂಜಿಯ ನಿಲುವು ಇದಕ್ಕೆ ಸ್ಫೂರ್ತಿಯನ್ನು ನೀಡಲಿ ಎಂದು ಆಶಿಸುವೆ.

✵



## ಹೊಸ ಸೂತ್ರ

**ಕೆಟ್ಟದ್ದನ್ನು ಕೇಳಬೇಡ**

**ಕೆಟ್ಟದ್ದನ್ನು ನೋಡಬೇಡ**

**ಕೆಟ್ಟದ್ದನ್ನು ಆಡಬೇಡ**

**ಕೆಟ್ಟದ್ದನ್ನು ಮೇಲ್ ಮಾಡಬೇಡ**



# ಈ-ಮೇಲ್ ಕವನಗಳು

- ಎಚ್. ಡುಂಡಿರಾಜ್

## ಉತ್ತರ

ಐ ಲವ್ ಯೂ ಎಂದು ಅವಳು
ಕಳುಹಿಸಿದಳು ಇ-ಮೇಲು
ನಾನು ಉತ್ತರಿಸಿದೆ
ಐ ಲವ್ ಯೂ ಆಮೇಲೂ!

## ಸಮಸ್ಯೆ

ಯಕ್ಷನ ಹಾಗೆ ಮೋಡ
ನೋಡುತ್ತ ನಿಲ್ಲುವುದು ಬೇಡ
ಪ್ರೇಮ ಸಂದೇಶ ಕಳಿಸಲು ಈಗ
ಉಂಟು ಸುಲಭದ ದಾರಿ
ಫೋನು, ಮೆಸ್ಸೇಜು, ಇ-ಮೇಲು
ಸಮಸ್ಯೆ ಎಂದರೆ
ಸಿಗುವುದಿಲ್ಲ ಫಿಮೇಲು!

## ಪ್ರತಿಕ್ರಿಯೆ

ವಿಪರೀತ ಕಷ್ಟ ಪಟ್ಟು
ರಾತ್ರಿ ಇಡೀ ನಿದ್ದೆಗೆಟ್ಟು
ಬರೆದು ಕಳಿಸಿದ ಇ-ಮೇಲ್
ಪ್ರೇಮ ಕವನಗಳ ಕಟ್ಟು
ಮಾಡಿದಳು ಆಕೆ
ಓದದೆ ಡಿಲಿಟ್ಟು!

# ದುರಂತ

ಅವಳನ್ನು ನಾನು ತುಂಬಾ
ಹಚ್ಚಿಕೊಂಡಿದ್ದೆ
ನನ್ನ ಅಟ್ಯಾಚ್‌ಮೆಂಟ್
ಎಷ್ಟೆಂಬುದನ್ನು ಇ-ಮೇಲ್‌ನ
ಅಟ್ಯಾಚ್‌ಮೆಂಟ್‌ನಲ್ಲಿ
ಬರೆದು ಕಳಿಸಿದ್ದೆ
ಆದರೆ ಏನು ಮಾಡಲಿ?
ಎಲ್ಲವನ್ನೂ ಅಳಿಸಿ ಹಾಕಿತು
ಅವಳ ಕಂಪ್ಯೂಟರಿನ
ಒಂದೇ ಒಂದು ಕೀಲಿ

# ಅಂದರೆ

ಇ-ಮೇಲ್ ಅಂದರೆ
ಮಿಂಚಂಚೆ
ಫೀಮೇಲ್ ಅಂದರೆ
ಮಿಂಚಂತೆ!

## ರಾಜರತ್ನಂ – ಸಿದ್ದಾರ್ಥ

ಜಿ.ಪಿ. ರಾಜರತ್ನಂ ಅವರು ಪಡುಕೋಣೆಯವರ ಮನೆಯಲ್ಲಿ ಸುಮಾರು ನಾಲ್ಕು ತಿಂಗಳು ಇದ್ದರಂತೆ. ರಾಜರತ್ನಂ ಅವರ ಪತ್ನಿ ಸೀತಮ್ಮ ಮತ್ತು ಮಗ ಶ್ರೀಧರ ಬೆಂಗಳೂರಿನಲ್ಲೇ ಇದ್ದರಂತೆ. ಹಾಗೆ ಅಲ್ಲಿರುವಾಗ ರಾಜರತ್ನಂ ಅವರು ಬೌದ್ಧ ಧರ್ಮದ ಬಗೆಗೆ ಚಿಂತಿಸಿ, ಚರ್ಚಿಸಿ ಬರೆಯಲು ತೊಡಗಿದರಂತೆ. ಅದು ತಿಳಿದಾಗ ಪಡುಕೋಣೆಯವರ ಪತ್ನಿ ನೀವು ಸಿದ್ದಾರ್ಥ ಹೆಂಡತಿ ಮಕ್ಕಳನ್ನು ಬಿಟ್ಟು ಹೋದ ಹಾಗೆ ನೀವೂ ಸಹ ನಿಮ್ಮ ಹೆಂಡತಿ ಮಗುವನ್ನು ಬಿಟ್ಟು ಬಂದಿಲ್ಲ ಎಂದುಕೊಳ್ಳುತ್ತೇನೆ. ಆದಷ್ಟು ಬೇಗ ನಿಮ್ಮ ಬರಹ ಮುಗಿಸಿ ನಿಮ್ಮ ಹೆಂಡತಿ ಮಗುವನ್ನು ಸೇರಿಕೊಳ್ಳಿ ಎಂದು ತಮಾಷೆ ಮಾಡಿದರಂತೆ.



# ಸ್ಲೋ ಮೇಲ್ ವರ್ಸಸ್ ಈ-ಮೇಲ್

**- ಇ.ಆರ್. ರಾಮಚಂದ್ರನ್**

**ಮು**ಂಚೆಯೆಲ್ಲಾ ಪೋಸ್ಟ್ ಮ್ಯಾನ್ ದಿನಕ್ಕೆ ಮೂರು ಬಾರಿ ನಡೆದು ಬಂದು ಅಂಚೆ ಕೊಟ್ಟು ಹೋಗುತ್ತಿದ್ದರು.

ಬೆಳಗ್ಗೆ ಸುಮಾರು 10 ಘಂಟೆಗೆ ಬರುವನು ತರ್ತಾ ಇದ್ದದ್ದು ಕುಂಕುಮ ಮತ್ತು ಹಳದಿ ಹಚ್ಚಿದ ಕವರಿನ ಒಳಗಡೆ ಒಂದು ಕಡೆ ಹಳದಿ ಇನ್ನೊಂದು ಕಡೆ ಗುಲಾಬಿ ಬಣ್ಣದ ಮದುವೆ ಮುಂಜಿಯ ಇನ್ವಿಟೇಷನ್‌ಗಳು. ಮತ್ತೊಂದು ಎಂಪ್ಲಾಯ್‌ಮೆಂಟ್ ಎಕ್ಸ್ಚೇಂಜಿನಿಂದ, 'ನಿಮಗೆ ಈ ವರ್ಷ ಎಲ್ಲಿಂದಲೂ ಇಂಟರ್‌ವ್ಯೂ ಕಾಲ್ ಬರುವುದಿಲ್ಲವೆಂದು' ತಿಳಿಯಪಡಿಸಿ ವಿಷಾದ ಸೂಚಿಸಿ ಕಳಿಸಿದ ಕಾಗದ. ಇದನ್ನು ತಿಂಗಳು ತಿಂಗಳೂ ನಿಮಗೆ ತಪ್ಪದೆ ತಲುಪಿಸುವನು ಪೋಸ್ಟ್ ಮ್ಯಾನ್! ಮತ್ತೆ ಆಗಾಗ್ಗೆ ಖಂಡಿತವಾಗಿ ಬರುವ ಬೆದರಿಕೆ ಪತ್ರಗಳು; ಸ್ಯಾಂಪಲ್: ಹೋದ ತಿಂಗಳು ಮೌನಿ ಅಮಾವಾಸ್ಯದ ರಾತ್ರಿ ಸುಬ್ಬಾಶಾಸ್ತ್ರಿಗಳು ಅವರ ಹಿತ್ತಲ ಕಕ್ಕಸ್ಸಿಗೆ ಹೋಗುವಾಗ ಒಂದು ಹಾವನ್ನು ತುಳಿದಿದ್ದರ ಪರಿಣಾಮವಾಗಿ ಬರುವ ಕೃಷ್ಣಪಕ್ಷದ ಗೋಪಾಲಸ್ವಾಮಿಯ ತೇರಿನ ದಿನ ಬೆಳ್ಳಂಬೆಳಿಗ್ಗೆ ನೀನು ಎರಡು ಸೇರು ಗಟ್ಟಿ ಹಾಲು ಅಭಿಷೇಕ ಮಾಡಿಸಬೇಕು. ಹಾಲಿಗೆ ನೀರು ಸೇರಿಸುವುದಾಗಲಿ ಅಥವಾ ನೀರಿಗೆ ಹಾಲು ಸೇರಿಸಿದರೆ ಅಘೋರ ನರಕದಲ್ಲಿ ಚಿತ್ರಹಿಂಸೆಗೆ ಒಳಗಾಗುವೆ. ಇದನ್ನು ಇಪ್ಪತ್ತು ಕಾರ್ಡುಗಳಲ್ಲಿ ಬರೆದು ಟಪಾಲಿನಲ್ಲಿ ಬೇರೆ ಬೇರೆ ವಿಳಾಸಕ್ಕೆ ಕಳಿಸದಿದ್ರೆ ಮೇಲೆ ಬರೆದ ಹಿಂಸೆ ಈ ಜನ್ಮದಲ್ಲೇ ಅರವತ್ತರ ಅರುಳು ಮರುಳು ಬರುವುದಕ್ಕೆ ಮುಂಚೆಯೇ ನಿನಗೆ ಖಡಾಖಂಡಿತವಾಗಿ ವಕ್ರಿಸುತ್ತೆ. ಇಂತಿ......

**ದಿನಕ್ಕೆ ಮೂರು ಸಾರಿ ಬರುತ್ತಿದ್ದ ಆ ಪೋಸ್ಟ್‌ಮನ್‌ಗಳು ಎಲ್ಲಿ ಹೋದರು?**

ವ್ಯಾಪಾರ ಡಲ್ಲಾಗಿದೆ ಎಂದು ಪೋಸ್ಟ್ ಆಫೀಸಿನವರೇ ಈ ತರಹದ ಪತ್ರ ಕಳುಹಿಸುತ್ತಿದ್ದರೋ ಗೊತ್ತಿಲ್ಲ, ಆದರೆ ಬಂದ ದಿನವೇ ಜನ ಹೆದರಿ ಇಂತಹ ಕಾರ್ಡುಗಳನ್ನು ಬರೆದು ಪೋಸ್ಟ್ ಡಬ್ಬಕ್ಕೆ ತುಂಬುತ್ತಿದ್ದರು.

ಮಧ್ಯಾಹ್ನದ ಟಪಾಲಿನವನು ಬಂದರೆ ಎಲ್ಲರಿಗೂ ಖುಷಿ. ಮಗನಿಂದ ಮನಿಯಾರ್ಡರ್ ಬಂದ ಖುಷಿಯಲ್ಲಿ ಪುಟ್ಟತಾಯಿಯಿಂದ ಅವನಿಗೆ ನಾಲ್ಕಾಣೆ ಬಕ್ಷೀಸ್. ಸುಬ್ಬಜ್ಜಿಯ ಮನೆಯಲ್ಲಿ ಜಗುಲಿಯಲ್ಲಿ ಕುಳಿತು ಮೊಮ್ಮಗ ಕಳಿಸಿದ ಮನಿಯಾರ್ಡರ್ ಕೆಳಗೆ ಬರೆದಿದ್ದನ್ನು ಓದಿ ಹೇಳಿ ಹರಟೆ ಹೊಡೆದು ಮಜ್ಜಿಗೆ ಕುಡಿದು ಹೊರಡುವನು. ಮತ್ತೆ ಯಾವುದಾದರೂ ರಿಜಿಸ್ಟರ್ಡ್ ಪೋಸ್ಟ್, ಜಲಂದರ್ನಿಂದ ವುಲ್ಲನ್ ಸ್ವೆಟರ್ ಹೆಣೆಯುವುದಕ್ಕೆ ಹರಿಣಿ ತರಿಸಿದ ವುಲ್. ಪೋಸ್ಟ್ ಮ್ಯಾನ್ಗೆ 15 ರೂಪಾಯಿ ಕೊಟ್ಟ ಮೇಲೆ ಸಿಕ್ಕಿದ ವುಲ್ ಹೆಣೆದ ಇಪ್ಪತ್ತು ದಿವಸದಲ್ಲೇ ಸ್ವೆಟರ್ ಛೋಲಿಯಾಗಿ ಡಿಸೆಂಬರ್ ಚಳಿಗೆ ಬೆಡ್ರೂಮಿನಲ್ಲಿ ಹಾಕಿಕೊಳ್ಳುತ್ತಾರೆ ಅವಳ ಯಜಮಾನ್ರು!

ಸಂಜೆಯ ಪೋಸ್ಟ್ ಮ್ಯಾನ್ಗೆ ಕೆಲಸವೇ ಇರಲಿಲ್ಲ. ಯೂನಿಫಾರ್ಮ್ ಹಾಕದೆ ಪ್ಯಾಂಟಿನ ಮೇಲೆ ಕಲರ್ಡ ಬುಷ್ ಶರ್ಟು ಹಾಕಿಕೊಂಡು ಒಂದೆರೆಡು ಕಾಗದ ಕೊಟ್ಟು ಸಾಯಂಕಾಲದ ಶೋ, 'ರತ್ನಗಿರಿ ರಹಸ್ಯ'ಕ್ಕೋ, ದೊಡ್ಡಣ್ಣ ಹಾಲ್ನಲ್ಲಿ ದಾರಾಸಿಂಗ್-ಕಿಂಕಾಂಗ್ ಕುಸ್ತಿಗೋ ಹೋಗುವುದು ವಾಡಿಕೆ.

ಇ-ಮೇಲ್ ಬಂದಮೇಲೆ ಸ್ಲೋ-ಮೇಲ್ ಬಹಳ ಕಡಿಮೆಯಾಗುತ್ತಾ ಬಂತು. ಪೋಸ್ಟ್ ಮ್ಯಾನ್, ಪೋಸ್ಟ್ ವುಮನ್ ಅವರನ್ನು ನೋಡುವುದೇ ಕಡಿಮೆ. ಅವರು ಯಾವತ್ತಾದರೂ ಅಪ್ಪಿ ತಪ್ಪಿ ಮನೆಗೆ ಬಂದು ಕಾಗದ ಕೊಟ್ಟರೆ ಅದು ಹೋದ ವರ್ಷ ಬರೆದ ಕಾಗದ. ನಿಮ್ಮ ಇನ್ಶೂರೆನ್ಸ್ ಏಜೆಂಟ್ ನೀವು ಇನ್ನೂ ಬದುಕಿದ್ದೀರಾಂತ ಟೆಸ್ಟ್ ಮಾಡಲು ಕಳಿಸಿದ ಹೋದ ವರ್ಷದ ನ್ಯೂ ಈಯರ್ ಗ್ರೀಟಿಂಗ್ ಕಾರ್ಡ!

ಇ-ಮೇಲ್‌ನಲ್ಲಿ ಕೂಡ ನಿಮ್ಮನ್ನು ಪೆದ್ದಾಂತ ದೂರದಿಂದಲೇ ಗ್ರಹಿಸಿ ಹೀಗೆ ಮೇಲ್ ಕಳಿಸುತ್ತಾರೆ: 'ನಿಮಗೆ ಒಂದು ಶುಭ ಸಮಾಚಾರ.' ಹೋದ ವರ್ಷ ಕಳುಹಿಸಿದ ಇ-ಮೇಲ್‌ಗಳಲ್ಲಿ ನಿಮ್ಮ ಇ-ಮೇಲ್ ಅತಿ ಶ್ರೇಷ್ಠವಾದುದೆಂದು ಪರಿಗಣಿಸಿ, ಕೋಕ ಕೋಲಾ ಮತ್ತು ಮೈಕ್ರೋ ಸಾಫ್ಟ್ ಕಂಪನಿಗಳು ನಿಮಗೆ $ 1,000,000,000 ಬಹುಮಾನವನ್ನು ಘೋಷಿಸಿದ್ದಾರೆ. ಬರುವ ತಿಂಗಳು ನ್ಯೂಯಾರ್ಕ್‌ನ ರಾಕಫೆಲ್ಲರ್ ಸೆಂಟರ್ನಲ್ಲಿ ಅಮೇರಿಕದ ರಾಷ್ಟ್ರಪತಿ ಬರಾಕ್ ಒಬಾಮ ಅವರ ಸ್ವಹಸ್ತದಿಂದ ನಿಮಗೆ ಡ್ರಾಫ್ಟ್ ಕೊಡುತ್ತಾರೆ. ಅದನ್ನು ಪ್ರಪಂಚದ ಎಲ್ಲಾ ಟಿವಿ ಚಾನಲ್‌ಗಳೂ ಲೈವ್ ಆಗಿ ಕವರ್ ಮಾಡುತ್ತಾರೆ. ನಿಮ್ಮ ಮನೆ ಹತ್ತಿರ ಇರುವ 'ಉಂಡಾಡಿ ಗುಂಡ' ಅವರ ಚಾನಲ್ರೂ ಇದನ್ನು ಬಿತ್ತರಿಸುತ್ತಾರೆ.

ಆದರೆ ಒಂದು ಸಣ್ಣ ಪ್ರಾಬ್ಲಂ! ನಿಮ್ಮ ಅಕೌಂಟ್ ಓಪನ್ ಮಾಡಲು, ಅಷ್ಟು ದೊಡ್ಡ ಡ್ರಾಫ್ಟ್ ತಯಾರು ಮಾಡಲು ಕೆಲವು ಚಾರ್ಜು ಖರ್ಚುಗಳಿವೆ. ಆದ್ದರಿಂದ ನೀವು ಕೂಡಲೇ $ 10,000ಗೆ ಒಂದು ಡ್ರಾಫ್ಟನ್ನು ಈ ಕೆಳಗಿನ ಅಡ್ರೆಸ್ಸಿಗೆ ದಯವಿಟ್ಟು ಕಳಿಸಿಕೊಡಿ. ನಿಮ್ಮ ಡ್ರಾಫ್ಟ್ ಕೈಗೆ ಬರುತ್ತಲೇ, ನಿಮ್ಮ ಹೆಸರಿನಲ್ಲಿ ದೊಡ್ಡ ಅಮೌಂಟಿನ ಡ್ರಾಫ್ಟ್ ಬರೆಯಲು ಶುರು ಮಾಡುತ್ತೇವೆ. ಇಂದೇ ಕಳಿಸಿ. ಇದನ್ನು ಕಳಿಸಿದವನು ನೀವು ಯಾವತ್ತೂ ನೋಡದ ಹೆಸರು ಗೊತ್ತಿಲ್ಲದ ಇಥಿಯೋಪಿಯಾದ ನಿಮ್ಮ ಹಿತೈಷಿ ಜಾನ್!

ಈ ಮಧ್ಯೆ ಹೊಸ ರೀತಿಯ ಇ-ಮೇಲ್ ಹುಟ್ಟುಕೊಂಡಿವೆ. ಮೊನ್ನೆ ನಮ್ಮ ಒಂಟಿಕೊಪ್ಪಲ್ಲಿನಲ್ಲಿರುವ ಸ್ನೇಹಿತ ಗೋಪಿಯಿಂದ ಇ-ಮೇಲ್ ಒಂದು ಬಂತು: 'ಹಲೋ ರಾಮಿ! ನಾನು ಮತ್ತು ನನ್ನ ಹೆಂಡ್ತಿ ಲಂಡನ್ನಿಗೆ ತಿರುಗಾಡಲು ಬಂದಿದ್ದೇವೆ. ಆದರೆ ಇಂದು ಟ್ರಫಾಲ್ಗರ್ ಸ್ಕ್ವೇರ್ನಲ್ಲಿರುವಾಗ ನನ್ನ ಪಾಸ್‌ಪೋರ್ಟ್, ಕ್ರೆಡಿಟ್ ಕಾರ್ಡು, ಪರ್ಸು ಎಲ್ಲಾ ಪಿಕ್‌ಪ್ಯಾಕೆಟ್ ಆಗಿದೆ. ಮೈಮೇಲೆ ಹಾಕಿರುವ ಬಟ್ಟೆ ಬಿಟ್ಟು ಬೇರೆ ಏನೂ ಇಲ್ಲ. ಹೋಟಲಿಗೆ ಹೋದ್ರೆ ರೂಮ್ ರೆಂಟು ಕೊಟ್ಟಿಲ್ಲಾಂತ ಮಾಂಸ ಕಟ್ ಮಾಡಲು ಹಾಕುತ್ತಾರೆ. ಆಮೇಲೆ ನಮ್ಮನ್ನೇ ಪೀಸ್ ಪೀಸ್ ಮಾಡಿ ಹಾಕ್ತಾರೆ. ದಯವಿಟ್ಟು ಈ ಕೆಳಗಿನ ಅಡ್ರೆಸ್ಸಿಗೆ 500 ಪೌಂಡು ಕಳಿಸಿಕೊಡು. ಬೇರೆ ಸ್ನೇಹಿತರಿಗೂ ಇ-ಮೇಲ್ ಕಳಿಸಿದ್ದೇನೆ. ಇದು ನಮ್ಮಿಬ್ಬರ ಸ್ನೇಹದ ಪರೀಕ್ಷೆಯ ಘಳಿಗೆ ಅಂದುಕೊ. ನೀನು ಕಳಿಸದಿದ್ದರೆ ನಾವು ಲಂಡನ್ ಚಾನೆಲ್‌ನಲ್ಲಿ ಹಾರದೆ ಬೇರೇ ವಿಧಿಯಿಲ್ಲ. ಆದರೆ ಒಂದು ವಿಷಯ ಹೇಳ್ತೀನಿ, ನಮ್ಮಿಬ್ಬರ ಶವ ಜೀವನ ಪೂರ್ತಿ ನಿನಗೆ ನಿದ್ದೆ ಬರದ ಹಾಗೆ ಬಂದು ಕಾಡುತ್ವೆ.'

ಟ್ರಫಾಲ್ಗರ್ ಸ್ಕ್ವೇರ್ ಇರಲಿ, ಗೋಪಿ ಒಂಟಿಕೊಪ್ಪಲ್ನಿಂದ ಮೂರು ಕಿ.ಮಿ. ಲಕ್ಷ್ಮಿ ಪುರಂನಲ್ಲಿ ಇರುವ ಸಿದ್ದಪ್ಪ ಸ್ಕ್ವೇರ್ಗ್ಗೂ ಹೋಗಿಲ್ಲ! ಸ್ಕೂಲಿನಿಂದ ಫ್ರೀಯಾಗಿ ಚಾಮುಂಡಿ ಬೆಟ್ಟಕ್ಕೆ ಹೋದ ಮೇಲೆ ಅದರ ಕಡೆ ಅವನು ಕಾಲು ಹಾಕಿಲ್ಲ. ಯಾರೋ ಗೋಪೀನ ಮೊನ್ನೆ ಸಂತೇಪೇಟೆಯಲ್ಲಿ ಟೆಂಟ್ ಹೋಟಲ್ನಲ್ಲಿ ಒನ್ ಬೈ ಟೂ ಕಾಫೀನ ಸಾಸರ್ನಲ್ಲಿ ಹೀರ್ತಾ ಇದ್ದದ್ದನ್ನು ನೋಡಿದ್ರಂತೆ.

ಆಮೇಲೆ ಗೊತ್ತಾಯಿತು. ಇದು ಫ್ರಾಡ್ ಇ-ಮೇಲಂತೆ! ದುಡ್ಡು ಹೊಡೀಬೇಕೂಂತ ಮಾಡಿರುವ ಆಧುನಿಕ ಟೆಕ್ನಾಲಜಿ ಉಪಯೋಗಿಸಿ ಮಾಡಿರುವ ಪ್ಲಾನ್ ಇದು!



**ನಿಮ್ಮ ಇಂದಿನ ಕಾರ್ಯಕ್ರಮ ಹೀಗಿದೆ ಸರ್:**
10ಕ್ಕೆ ಸ್ಪ್ಯಾಮ್ ಮೆಸೇಜ್ ಡಿಲೀಟ್ ಮಾಡುವುದು; 10.15ಕ್ಕೆ ಜೋಕ್ಸ್ ಫಾರವರ್ಡ್ ಮಾಡುವುದು; 10.35ಕ್ಕೆ ಆನ್‌ಲೈನ್ ಪೋಕರ್ ಆಡುವುದು...



# ನಾ ಮೇಲೋ ನೀ ಮೇಲ್-ಓ

**- ಅನಿತಾ ನರೇಶ್ ಮಂಚಿ**

**ಎ**ರಡೂ ಕೈಗಳಲ್ಲಿ ಆಗ ತಾನೇ ಪೇಟೆಯಲ್ಲಿ ಖರೀದಿಸಿದ ವಸ್ತುಗಳನ್ನು ತುಂಬಿದ್ದ ಚೀಲಗಳಿದ್ದವು. ಬಾರದ ಬಸ್ಸಿಗಾಗಿ ಕಣ್ಣು ನಿಲುಕಿಸಿ ಕಾಯುತ್ತಾ ನಿಂತಿದ್ದೆ. ಕಿವಿಗಳಿಗೆ ಏನೂ ಕೆಲಸವಿಲ್ಲದಿದ್ದ ಕಾರಣ ಪಕ್ಕದಲ್ಲಿ ನಿಂತಿದ್ದವರ ಮಾತುಗಳ ಮೇಲೆ ಹರಿಬಿಟ್ಟೆ. 'ಖಂಡಿತಾ ಇವತ್ತು ನಿನ್ನ ಮೈಲಿಗೆ ಕಳಿಸ್ತೇನೆ ಮಾರಾಯ, ಡೋಂಟ್ ವರಿ' ಅನ್ನುವುದು ಕೇಳಿಸಿತು. ಇದ್ಯಾವ ಮೈಲಿಗೆಯೋ, ಅದು ಹೇಗೆ ಕಳಿಸ್ತಾರೋ ಅಂತ ಅಚ್ಚರಿಗೊಳಗಾಗಿದ್ದೆ.

ಆದರೆ ಯಾವಾಗ ನಮ್ಮ ಮನೆಗೂ ಒಂದು ಕಂಪ್ಯೂಟರ್ ಕಾಲಿರಿಸಿತೋ ಆಗ ತಿಳಿಯಿತು ನೋಡಿ ಈ ಮೈಲಿಗೆಯ ರಹಸ್ಯ. ಪೆನ್ನು ಪೇಪರುಗಳ ಹಂಗಿಲ್ಲದೇ ಕ್ಷಣಾರ್ಧದಲ್ಲಿ ಎಲ್ಲಿಂದ ಎಲ್ಲಿಗೂ ಸಂದೇಶಗಳನ್ನು ರವಾನಿಸಬಲ್ಲ ಇ-ಮೇಲ್ ಅವರ ಬಾಯಲ್ಲಿ ಸಿಂಪಲ್ಲಾಗಿ ಮೇಯಿಲ್ ಆಗಿತ್ತು. ಮೇಲ್ ಫೀಮೇಲ್ ಎಂಬ ಭೇದವಿಲ್ಲದೇ ಎಲ್ಲರೂ ಬಳಸುವ ಇ-ಮೇಲ್ ಅನ್ನು ನಾನೂ ಬಳಸದಿದ್ದರೆ ನನ್ನನ್ನು ಇನ್ಯಾವ ಕೆಟಾಗರಿಗೆ ಸೇರಿಸಿ ಬಿಡ್ತಾರೋ ಎಂಬ ಭಯದಲ್ಲಿ ನಾನೂ ಒಂದು ಅಕೌಂಟ್ ಓಪನ್ ಮಾಡಿದೆ.

**ಒಂದೇ ಜೊತೆ ಹಣ್ಣು ಕಾಯಿ ಇದ್ರೆ ಸಾಕು ಸ್ವಾಮೀ.. ಎಲ್ಲಾ ದೇವರುಗಳಿಗೂ ನೈವೇದ್ಯ ಮಾಡಬಹುದು**

ಊರಿಗೆ ಬಂದವಳು ನೀರಿಗೆ ಬಾರದಿದ್ದಾಳೆಯೇ..? ನನಗೆ ಕೆಲವೊಂದು ಫನ್ ಮೇಲ್‌ಗಳ ಜೊತೆಗೆ ಓದಿ ತಲೆಕೆಡಿಸಿಕೊಳ್ಳುವಂತಾ ಮೇಲ್‌ಗಳೂ ಬಂದು ಇನ್ ಬಾಕ್ಸ್ ತುಂಬಿ ತುಳುಕತೊಡಗಿತು. ಕೆಲವೊಮ್ಮೆ ಪತ್ರಿಕೆಗಳಿಗಾಗಿ ಲೇಖನಗಳನ್ನು ಕಳುಹಿಸುವಾಗ ಫೈಲ್ ಅಟ್ಯಾಚ್ ಮಾಡುವುದನ್ನೇ ಮರೆತು ಬಿಡುತ್ತಿದ್ದೆ. ಇದನ್ನು ಸರಿ ಪಡಿಸಲು ಕ್ಷಮೆ ಕೋರಿ ಇನ್ನೊಂದು ಮೇಲ್ ರವಾನೆ. ಆದರೆ ಇದರಿಂದಾಗಿ ಸಂಪಾದಕರ ಕ.ಬು. ತುಂಬುವ ಭಯವೇನೂ ಇಲ್ಲ. ಅವರ ಮಾರುತ್ತರಕ್ಕಾಗಿ ಸ್ಟ್ಯಾಂಪ್ ಲಗತ್ತಿಸಿದ ಕವರ್ ಕಳುಹಿಸುವ ತಲೆ ಬಿಸಿಯೂ ಇಲ್ಲ.

ಇದರ ಅತಿ ಅದ್ಭುತ ಉಪಯೋಗದ ಬಗ್ಗೆ ತಿಳಿದಾಗ ಅಚ್ಚರಿಯಾದದ್ದು ಸುಳ್ಳಲ್ಲ. ಒಂದೇ ಜೊತೆ ಹಣ್ಣು ಕಾಯಿ ಇದ್ರೆ ಸಾಕು ಸ್ವಾಮೀ.. ಎಲ್ಲಾ ದೇವರುಗಳಿಗೂ ನೈವೇದ್ಯ ಮಾಡಬಹುದು. ಮೊದಲಿನಂತೆ ಪ್ರತ್ಯೇಕ ಪ್ರತ್ಯೇಕವಾಗಿ ಸಾಷ್ಟಾಂಗ ನಮಸ್ಕಾರಗಳ ಅಗತ್ಯವಿಲ್ಲ. ಮೊದಲೇ ಹೆಸರುಗಳನ್ನು ಆಯ್ಕೆ ಮಾಡಿ ಸಿದ್ಧಪಡಿಸಿಟ್ಟುಕೊಂಡು ಒಂದೇ ಸಲ ಜೈ ಅಂದು 'ಸೆಂಡ್' ಒತ್ತಿದರೆ ಸಾಕು, ತಗೊಳ್ಳಿ! ಅವರೆಲ್ಲರ ಕಂಪ್ಯೂಟರಿನ ಒಳಗೆ ನಿಮ್ಮ ಸಂದೇಶ ತೂರಿಕೊಂಡು ಬಿಟ್ಟಿರುತ್ತೆ!

ಆದರೆ ನನ್ನಂತಾ ಅವಸರಿಗಳು ಇಲ್ಲೂ ಎಡವದೇ ಇರಲು ಸಾಧ್ಯವಿಲ್ಲ. ಇತ್ತೀಚೆಗೆ ನನ್ನ ಸಂಬಂಧಿಕರೊಬ್ಬರು ನನ್ನ ಗೆಳತಿಯ ತಮ್ಮನಿಗೆ ತೋರಿಸಲು ತಮ್ಮ ಮಗಳ ಜಾತಕ ಮತ್ತು ಫೊಟೋ ನನಗೆ ಮೇಯಿಲ್ ಮಾಡಿದ್ರು. ನಾನದನ್ನ ಗೆಳತಿಯ ಐಡಿಗೆ ಫಾರ್‌ವರ್ಡ್ ಮಾಡಿ ಅವಳ ಫೋನಿಗಾಗಿ ಕಾಯ್ತಾ ಇದ್ದೆ. ಒಂದೆರಡು ದಿನವಾದ್ರೂ ಏನು ಸುದ್ದಿಯಿಲ್ಲವೆಂದುಕೊಂಡು ಅವಳಿಗೆ ಫೋನ್ ಮಾಡಿ ವಿಚಾರಿಸಿದ್ರೆ ನಂಗೇನೂ ಬಂದಿಲ್ಲ ಅನ್ಬೇಕೆ! ಸರಿ ಎಲ್ಲೊ ತಪ್ಪಾಗಿರ್ಬೇಕು ಅಂದುಕೊಂಡು ಮತ್ತೆ ನನ್ನ ಮೇಲ್ ಬಾಕ್ಸ್ ಓಪನ್ ಮಾಡಿ ನೋಡಿದ್ರೆ, ನಾನು ಇವಳಿಗೆ ಕಳುಹಿಸುವ ಬದಲು ಅದೇ ಹೆಸರಿನ ನನ್ನ ಚಿಕ್ಕಮ್ಮನ ಐಡಿಗೆ ಕಳುಹಿಸಿ ಬಿಟ್ಟಿದ್ದೆ! ಈ ಎಡವಟ್ಟನ್ನು ಹೇಗಾದ್ರೂ ಚಿಕ್ಕಮ್ಮನಿಗೆ ಫೋನ್ ಮಾಡಿ ನಿವಾರಿಸುವ ಅಂದು ಕೊಂಡು ಫೋನ್ ಕೈಗೆತ್ತಿಕೊಳ್ಳುವುದಕ್ಕೂ ಗೇಟ್ ಕಿರ್ ಅನ್ನುವುದಕ್ಕೂ ಸರಿ ಹೋಯ್ತು. ಯಾರಪ್ಪ ಅಂತ ಇಣುಕಿ ನೋಡಿದ್ರೆ ನನ್ನ ಚಿಕ್ಕಮ್ಮ ಕೈಯ್ಯಲ್ಲಿ ಹೂವು ಹಣ್ಣು ಅಕ್ಷತೆ ಹಿಡಿದು ನಗು ಸೂಸುತ್ತಾ ಒಳ ಬರುತ್ತಾ ಇದ್ರು. 'ತುಂಬಾ ಥ್ಯಾಂಕ್ಸ್ ಕಣೇ.. ನಮ್ ವಿಕಾಸಂಗೆ ಒಳ್ಳೇ ಸಂಬಂಧ ಹುಡ್ಕೊಟ್ಟಿದ್ದೀಯ.. ನಾಡಿದ್ದು ನಿಶ್ಚಿತಾರ್ಥ.. ಮೊದ್ಲು ನಿಂಗೇ ಹೇಳೋಣ ಅಂತ ಬಂದೆ ಅನ್ನಬೇಕೇ...' ಇನ್ನು ನನ್ನ ಗೆಳತಿಗೆ ಹೇಗೆ ಸಮಜಾಯಿಶಿ ಕೊಡೋದು ಅಂತ ಗೊತ್ತಾಗದೇ ಈಗಲೂ ತಲೆ ಕೆರ್ಕೋತಾ ಇದ್ದೀನಿ.

ಇತ್ತೀಚೆಗೆ ನನ್ನ ಆತ್ಮೀಯರೊಬ್ಬರ ಮೇಲ್ ಹೀಗಿತ್ತು 'ಇಂದು ನಮ್ಮ ತೀರ್ಥರೂಪರು ವಿಧಿವಶರಾದರು.'

Say Cheers... Enjoy... ☺

ಅರ್ರೇ ಇದೇನಪ್ಪ ಹೀಗೆ ಬರೆದಿದ್ದಾರೆ. ತಂದೆ ತೀರಿಹೋದರು ಅಂತಿದೆ. ಕೆಳಗೆ ಹೀಗೆ ಬರೆದಿದೆಯೆಲ್ಲಾ ಛೇ..!! ಎಂತಾ ಮನುಷ್ಯರಪ್ಪಾ ಎಂದಿತು ಮನಸ್ಸು. ಮತ್ತೆ ಯಾಕೋ ಅವರು ಕಳುಹಿಸಿದ ಬೇರೆ ಮೇಲ್‌ಗಳನ್ನು ನೋಡಿದರೆ ಅಲ್ಲೂ Say Cheers... Enjoy... ☺ ಎಂದಿತ್ತು! ಅಲ್ಲೆಲ್ಲಾ ಸಮಂಜಸವಾಗಿಯೇ ಕಂಡ ಆ ವಿಶಿಷ್ಟ ಸಹಿ ಇಲ್ಲಿ ಮಾತ್ರ ಅಪಾರ್ಥಕ್ಕೆ ಎಡೆ ಮಾಡಿಕೊಟ್ಟಿತ್ತು.

ಏನೇ ಆದರೂ ಪರಿಸರ ನಾಶ ಮಾಡಿ ಪೇಪರ್ ತಯಾರಿಸಿ, ಬರೆದು, ಹರಿದು ಮುದ್ದೆ ಮಾಡಿ ರದ್ದಿ ಅಂಗಡಿಗೆ ಹಾಕುವುದಕ್ಕಿಂತ ಒಂದೇ ಬಟನ್ ಪ್ರೆಸ್ ಮಾಡಿ ಎಲ್ಲರಿಗೂ ಸುದ್ದಿ ಹಂಚುವ ಈ ಇ-ಮೇಲ್ ವಾಸಿ ಅನ್ನುತ್ತದೆ ಮನಸ್ಸು.. ನೀವೇನಂತೀರಾ..?

(ತಥಾಸ್ತು - ಸಂ.) ✵



# ಅಡಗೂಲಜ್ಜಿ@ಯಾಹೂ.ಕಾಮ್

**- ಸಿ.ಆರ್. ಸತ್ಯ**

‘‘**ಪು**ಟ್ಟೂ, ಈ–e–e–e ಮೈಲ್ ಅಂದರೆ ಏನೂ?’’

‘‘ನೀನು ಭಾರಿ ಸ್ಮಾರ್ಟು ಅಜ್ಜಿ. ನೀನೊಬ್ಬಳೇ ಇದುವರೆವಿಗೂ e–e–e ಅಂತ ಮೂರು e ಗಳನ್ನು ಉಪಯೋಗಿಸಿದ್ದು. ಕಂಗ್ಲಿಷ್‌ನಲ್ಲಿ ಇದರ ಅರ್ಥ: elliddarunu, elligebekadru, eshtotthigadaru ಕಳಿಸೋ ಮೈಲ್ ಅಂತ!’’

**ಅಜ್ಜನ ಅಡ್ರೆಸ್ ಬಾಕ್ಸ್‌ನಲ್ಲಿ ಬರೀ ಮೀನಾಕ್ಷಿ, ಲೋಲಾಕ್ಷಿ, ಜಲಜಾಕ್ಷಿ, ಕಾಮಾಕ್ಷಿ ಅನ್ನೋ ಹೆಸರುಗಳೇ ಇದೆಯಲ್ಲಾ...?**

‘‘ಎಲ್ಲಿದ್ದರೂನೂ, ಎಲ್ಲಿಗೆ ಬೇಕಾದ್ರೂ, ಎಷ್ಟೊತ್ತಿಗಾದ್ರೂ ಅಂದರೆ ಪೋಸ್ಟ್ ಆಫೀಸು, ಪೋಸ್ಟ್ ಬಾಕ್ಸು, ಸ್ಟಾಂಪೂ, ವಯಸ್ಸಾದ ಪೋಸ್ಟ್ ಮಾಸ್ಟರು... ಇವು ಯಾವುದೂ ಬೇಡವೇನೋ?’’

‘‘ಅವೆಲ್ಲಾ ನಿನ್ನ ಕಾಲದ ಕತೆ ಅಜ್ಜಿ! ಈಗ ಬೇಕಾಗಿರೋದು ಒಂದು ಲ್ಯಾಪ್‌ಟಾಪ್ ಅಷ್ಟೆ! ತೊಡೆ ಪೆಟ್ಟಿಗೆ!’’

‘‘ಓಹೋ! ನೋಡಿದೀನಿ ಕಣಪ್ಪ. ತೊಡೆ ಮೇಲೆ ಹೆಂಡ್ತಿ ಮಕ್ಕಳನ್ನ ಆಡಿಸ್ಕೊಂಡು ಕೂರಿಸ್ಕೊಳ್ತಿದ್ದ ಜನ ಈಗೀಗ ಆ ಕರೀಪೆಟ್ಟಿಗೇನ ಇಟ್ಕೊಂಡು ಜೀವನ ಸವೀತಿದ್ದಾರೆ. ಅಂದ್ಹಾಗೆ, ಅದರಲ್ಲಿ ಪೋಸ್ಟ್ ಮಾಡಿದ್ರೆ, ಪತ್ರ ಯಾವಾಗ ಸೇರುತ್ತೆ ಪುಟ್ಟೂ?’’

‘‘ತಕ್ಷಣ ಅಜ್ಜಿ! ಕಣ್ಣು ಮಿಟಕಿಸೋದರೊಳಗೆ! ಯಾಕೆ ಅಜ್ಜಿ! ನಗ್ತೀದೀ..?’’

‘‘ನಿನ್ನ ಅಜ್ಜ, ನಾನು ಐದನೇ ಸಲ ಹೆರಿಗೇಗೆ ಅಂತ ನನ್ನ ತವರು ಮನೆಗೆ ಬಂದಿದ್ದಾಗ, ಅವರು ಸರ್ವಿಸ್‌ನಲ್ಲಿದ್ದ ಊರಿನಿಂದ ನನಗೊಂದು ಬರೆದ ಪತ್ರ ನನಗೆ ಯಾವಾಗ ತಲುಪ್ತು ಗೊತ್ತೇ?’’

‘‘ಯಾವಾಗ?’’

''ನಮ್ಮ ಶಷ್ಟ್ಯಾಬ್ಧಿ ಪೂರ್ತಿ ಮಾಡ್ಕೊಂಡ ದಿನ ಪೋಸ್ಟ್ ಮ್ಯಾನ್ ತಂದ್ಕೊಟ್ಟ! ಅದರಲ್ಲಿ 'ಹುಷಾರಾಗಿದ್ಯಾ? ಲೇಹ್ಯಗಳ ಸ್ಟಾಕ್‌ಗಳೆಲ್ಲಾ ಇನ್ನೂ ಇವ್ಯೋ ಇಲ್ಲಾ ತಂದುಕೊಡಲೋ?' ಅಂತ ತಾತ ಬರೆದಿದ್ರು! ಅಂದ ಹಾಗೆ, ಇ-ಮೈಲ್‌ನಲ್ಲಿ ಫೋಟೋಗಳನ್ನೂ ಕಳಿಸ್ತಾರಂತೆ, ಹೌದೆ?''

''ಹ್ಞೂಂ, ಅಜ್ಜಿ! ಫೋಟೋ ಕಳಿಸ್ಬಹುದು, ವೀಡಿಯೋ ಕಳಿಸ್ಬಹುದು, ಗ್ರೀಟಿಂಗ್ಸ್ ಕಳಿಸ್ಬಹುದು.''

''ಹೌದೇ? ಹಾಗಾದ್ರೆ ಇ-ಮೈಲ್ ಮೂಲಕ ಪ್ರೀತಿ-ಪ್ರೇಮ ಅಂತ ಅಂದ್ಕೊಂಡು ಮದುವೇನೂ ಮಾಡ್ಕೋಬಹುದೇನೂ?''

''ಈಗಿನ ಕಾಲದ ಹುಡುಗರು ಹುಡುಗೀರು ಮಾಡ್ತಿರೋದೇ ಅದು ಅಜ್ಜಿ. ಅದಕ್ಕೆ Love at first hit! ಅಂತಾರೆ.''

''ಹಾಗಾದ್ರೆ ಹುಡುಗನ ಜೊತೆ ಅವನ ತಂದೆ ತಾಯಿಗಳು ಒಳ್ಳೇ ಗಳಿಗೇಲಿ ಹುಡುಗಿ ಮನೇಗೆ ಬಂದು, ಸಜ್ಜಿಗೆ-ಬೊಂಡಾ-ಕಾಫಿ ಎಲ್ಲಾ ಸವಿದು, ನಿಮ್ಮ ಮಗಳಿಗೆ ಸಂಗೀತ ಬರುತ್ಯೆ? ಅಂತ ಕೇಳೋ ಪದ್ಧತಿ ಈಗಿಲ್ವೆ?''

''ನೀನು ಯಾವುದೋ ದ್ವಾಪರ ಯುಗದ ವಿಷಯ ಮಾತಾಡ್ತಿದೀಯಾ ಅಜ್ಜಿ.''

''ಇ-ಮೈಲ್‌ನಲ್ಲೇ ಮದ್ವೇನೂ ಮಾಡ್ಕೊಂಡು ಬಿಡುತ್ವೋ ಏನೋ ಈ ಕಪಿ ಮುಂಡೇವು.''

''ಇನ್ನು ಅಷ್ಟು ಅಡ್ವಾನ್ಸ್ ಆಗಿಲ್ಲ ಅಜ್ಜಿ. ಸಧ್ಯಕ್ಕಂತೂ ವರಪೂಜೆ, ಕಾಶೀ ಯಾತ್ರೆ, ಧಾರೆ, ನಾಗೋಲಿ, ರಿಸೆಪ್ಷನ್, ಬಾಳೆ ಎಲೆ ಊಟ – ಇವೆಲ್ಲಾ ಇನ್ನೂ ಇವೆ. ಆದರೆ ಇವೆಲ್ಲಾ ಮೊದಲು ಇಮೈಲ್ ವಹಿವಾಟು ಆದ ಮೇಲೇ!''

''ಸಧ್ಯ, ಮಕ್ಕಳೂ ಇ-ಮೈಲ್‌ನಲ್ಲೇ ಹುಟ್ಲಲಿ ಅಂತ ಯಾವತ್ತು ಅನ್ನುತ್ವೋ ಈಗಿನ ಹುಡುಗೀರು?''

''ಅದು ಆದ್ರೂ ಆಗುತ್ತೆ ಅಜ್ಜಿ. ನಾನು ನೋಡ್ತಿದೀನಲ್ಲಾ, ಈಗಿನ ಹುಡುಗೀರು ಯಾವುದಕ್ಕೂ ಕಮ್ಮಿ ಇಲ್ಲ. ಈಗ ಇ-ಮೈಲ್ ವ್ಯವಸ್ಥೆ ಮೊಬೈಲ್ ಫೋನಿನಲ್ಲೂ ದಕ್ಕುತ್ತೆ ಅಜ್ಜಿ. ಈ ಹುಡುಗೀರು ಪಟಾಪಟ್ ಅಂತ ಅವರ ಮೊಬೈಲ್‌ನ ಕೀ ಪ್ಯಾಡ್‌ನ ಕುಟ್ಟೋದು ನೀನು ನೋಡಬೇಕು.''

''ನಮ್ಮ ಕಾಲದಲ್ಲಿ ಆಫೀಸಿನಲ್ಲಿ ಇರ್ತಿದ್ದ ಟೈಪಿಸ್ಟ್‌ಗಳ ತರಹಾನೇ?''

''ಅದಕ್ಕೂ ಹತ್ತರಷ್ಟು ಫಾಸ್ಟ್ ಆಗಿ ಬಡೆಯುತ್ತವೆ ಆ ಕೀಪ್ಯಾಡ್‌ನ? ಅವರ ಸಂವಾದಗಳೆಲ್ಲಾ ಪಡ್ಡೆ ಹುಡುಗರ ಜೊತೇಗೇ!''

''ಪಾಪ, ನೋಡಿದ್ರೆ, ನಿನಗೆ ಯಾರೂ ಇ-ಮೈಲ್ ಕಳಿಸ್ತಿಲ್ಲ ಅಂತ ಕಾಣುತ್ತೆ. ಹೊಟ್ಟೇಕಿಚ್ಚೇನೋ ಪುಟ್ಟೂ? ಅಂದ ಹಾಗೆ, ಇ-ಮೈಲ್‌ನಲ್ಲಿ ದುಡ್ಡು ಕಳಿಸಬಹುದಂತೆ ಹೌದೇ?''

''ಓಹೋ! ಬ್ಯಾಂಕ್ ಮೂಲಕ, ಒಂದೇ ಕ್ಷಣದಲ್ಲಿ ನಿನ್ನ ಅಕೌಂಟ್‌ಗೆ ದುಡ್ಡು ಹಾಕಬಹುದು. ಇನ್ನೊಬ್ಬರ ಅಕೌಂಟ್‌ಗೆ ನೀನು ದುಡ್ಡು ಸೇರಿಸಬಹುದು. ಎಲ್ಲಾ ಸೂಪರ್ ಫಾಸ್ಟ್ ಈಗ ಅಜ್ಜಿ!''

''ಹಾಗಾದ್ರೆ, ಮನಿ ಆರ್ಡರ್‌ಗಳ ಗತಿ?''

''ಹಾಗಂದ್ರೇನು ಅಜ್ಜಿ?''

''ಹೋಗಲಿ ಬಿಡು, ಪುಟ್ಟೂ, ನಿನ್ನ ರಜ ಯಾವಾಗ ಮುಗಿಯುತ್ತೆ? ನೀನು ಯಾವಾಗ ಅಮೇರಿಕಾಗೆ ವಾಪಸ್ಸು?''

''ನಾಳೆ ರಾತ್ರಿ ಅಜ್ಜಿ.''

''ಅಯ್ಯೋ! ಹೀಗೆ ಬರ್ತಿ, ಹಾಗೆ ಹೋಗ್ತಿಯಲ್ಲೋ ಪುಟ್ಟೂ, ಸಮಯ ಇದ್ದಿದ್ದರೆ, ಒಂದಿಷ್ಟು ಕೋಡುಬಳೆ, ಚಕ್ಕುಲಿ, ರವೆ ಉಂಡೆ ಮಾಡಿಕೊಡ್ತಿದ್ನಲ್ಲೋ.''

''ಹೋಗ್ಲಿ ಬಿಡು ಅಜ್ಜಿ, ಮೂರು ತಿಂಗಳಾದ ಮೇಲೆ ಇನ್ನೊಂದು ಸಲ ಇಲ್ಲಿಗೆ ಬರೋ ಪ್ಲಾನ್ ಇದೆ. ಆಗ ಮುಂಚೇನೇ ತಿಳಿಸ್ತೀನಿ.''

''ಹಾಗೇ ಮಾಡು ಮರೀ. ಮುಂಚೇನೇ ನನಗೊಂದು ಇ-ಮೈಲ್ ಕಳಿಸು.''

''ಅಜ್ಜಿ Are you joking? ನಿನಗೆ ಇ-ಮೈಲ್ ಅಡ್ರೆಸ್ ಇದ್ಯಾ?''

''ಹ್ಞೂಂ ಬರ್ಕೊ: 'ಅಡಗೂಲಜ್ಜಿ@ಯಾಹೂ.ಕಾಮ್' ಅಂತ.''

''ಇ-ಮೈಲ್ ವಿಷಯ ಎಲ್ಲಾ ಗೊತ್ತಿದ್ರು, ಇಷ್ಟು ಹೊತ್ತು ನನ್ನ ಕಾಲೆಳೀತಾ ತಮಾಷೆ ಮಾಡ್ತಿದ್ಯಾ ಅಜ್ಜಿ?''

''ಹ್ಞೂಂ ಪುಟ್ಟಿ! ಸುಮ್ಮನೆ ಬೇಜಾರು ಕಳ್ಕೊಳೋಕ್ಕೆ ಮಾಡ್ದೆ ಮರೀ! ಬೇಕಾದರೆ ನನ್ನ ಫೇಸ್ ಬುಕ್‌ನಲ್ಲೂ ಲಿಂಕ್ ಮಾಡ್ಕೋ. ಅಲ್ಲೂ ಇದೀನಿ. ನನ್ನ ಫೋಟೋನೂ ಇದೆ. ಅಂದಹಾಗೆ ಹುಷಾರು. ಒಳ್ಳೇ ಆಂಟಿ ವೈರಸ್ ಪ್ಯಾಕೇಜ್ ಉಪಯೋಗಿಸು. ಒಳ್ಳೇ ಸ್ಕಾಮ್ ಗಾರ್ಡ್ ಹಾಕ್ಕೋ. ಇಲ್ಲದಿದ್ದರೆ ಯಾವಳೋ ನೈಜೀರಿಯಾ ಹುಡುಗಿ ನಿನ್ನನ್ನ ಮದುವೆಗೆ ಸಿಕ್ಕಿಹಾಕಿಸಿ ನಿನ್ನ ಬೋಳಿಸ್ತಾಳೆ. ಆಮೇಲೆ ಒಂದೊಂದು ಸಲ ಇನ್ಯಾವನೋ ನಿನ್ನ ಇನ್‌ಬಾಕ್ಸ್‌ಗೆ ಹ್ಯಾಕ್ ಮಾಡಿ 'ನಿನ್ನಜ್ಜಿ ಸೀರಿಯಸ್ಸಾಗಿದ್ದಾಳೆ. ಅದಕ್ಕೆ ನನಗೆ ನೀನು ದುಡ್ಡು ಕಳಿಸೋಕ್ಕೆ ಹೇಳಿದಾಳೆ' ಅಂತೇನಾದರೂ ಬರೆದರೆ, ಪೆದ್ದು ಪೆದ್ದಾಗಿ ಅವನಿಗೆ ದುಡ್ಡನ್ನ ಇ-ಮೈಲ್ ಟ್ರಾನ್ಸ್‌ಫರ್ ಮಾಡೋಕ್ಕೆ ಹೋಗಬೇಡ. ನಾನು ಈಗ ಇರೋಹಾಗೇ ಕಲ್ಲುಗುಂಡ್ಹಾಗೇ ಇರ್ತೀನಿ. ಅಷ್ಟೂ ಬೇಕು ಅಂದ್ರೆ, ನಿನ್ನ ಅಜ್ಜನಿಗೆ ಫೋನ್ ಮಾಡು.''

''ಅಜ್ಜೀ ನೀನು ಭಾರೀ ಗ್ರೇಟ್ ಅಜ್ಜಿ! ನಿನ್ನ ಮನೆತನದಲ್ಲಿ ನಾನೊಬ್ಬನೇ ಮಂಕ ಆಗಿದೀನಿ ಅಂತ ಅಂದ್ಕೋತೀನಿ. ಇಷ್ಟೆಲ್ಲಾ, ನೀನು ಯಾರಿಂದ ಕಲಿತೆ?''

''ನಿಮ್ಮಜ್ಜನಿಂದಲೇ ಕಣೋ..''

''ಒಹೋ! ಹಾಗಾದರೆ ಅಜ್ಜಾನೂ ಕಂಪ್ಯೂಟರ್ savy ಏನು?''

‘‘ಹ್ಞೂಂ, ಆದರೆ ಅವರಿಗೆ ಈಗೀಗ ಲ್ಯಾಪ್‌ಟಾಪ್ ಮುಟ್ಟೋದಿಕ್ಕೆ ನಾನು ಬಿಡ್ತಾ ಇಲ್ಲ.’’

‘‘ಯಾಕಜ್ಜೀ?’’

‘‘ಒಂದಿನ ಅವರ ಅಡ್ರೆಸ್ ಬಾಕ್ಸ್ ನೋಡಿದೆ. ಕಾಂಟ್ಯಾಕ್ಟ್ಸ್‌ನಲ್ಲಿ ಬರೇ ಮೀನಾಕ್ಷಿ, ಲೋಲಾಕ್ಷಿ, ಜಲಜಾಕ್ಷಿ, ಕಾಮಾಕ್ಷಿ ಅನ್ನೋ ಹೆಸರುಗಳೇ ಇದ್ವು. ನಾನು ಯಾರ್‌ರೀ ಇವರೆಲ್ಲಾ – ಅಕ್ಷಿಗಳೂ ಅಂತ ಕೇಳಿದೆ. ‘ನಾನು ರಿಟೈರ್ಡ್ ಆದಮೇಲೆ ನನ್ನ ಆಫೀಸಿನಲ್ಲಿದ್ದ ಕಲೀಗ್ಸ್ ಜೊತೆ ಇನ್ನೂ ‘ಟಚ್’ನಲ್ಲಿ ಇದೀನಿ’ ಅಂತ ಅಂದ್ರು. ಅದಕ್ಕೆ!’’

‘‘ಓ ಮೈಗಾಡ್! ನೀವು ಭಾರಿ ಸ್ಮಾರ್ಟ್ ಕಪಲ್ ಅಜ್ಜಿ!’’

‘‘ಅಷ್ಟಲ್ಲದೇ ಈಗಿನ ಕಾಲದಲ್ಲಿ ಬದುಕೋಕ್ಕೆ ಆಗುತ್ತೇನೋ ಮರೀ.. ಅಲ್ಲಿ, ನನ್ನ ಕನ್ನಡಕ ಇಟ್ಟಿದೀನಲ್ಲ – ಒಂದು ಸ್ವಲ್ಪ ತಂದುಕೊಡು. ಒಂದು ಸಲ ಇನ್‌ಬಾಕ್ಸ್ ಚೆಕ್ ಮಾಡಿ ಮಲಕ್ಕೋತೀನಿ.’’

✵





# ಆ ಮೇಲ್, ಈ ಮೇಲ್ ಮದುವೆಯಾದ ಮೇಲ್

**- ಎಂ.ಕೆ. ಭಾಸ್ಕರರಾವ್**

**ಮ**ದುವೆಗೆ ಬನ್ನಿ ಎಂದು ಖುದ್ದು ಕರೆಯಲು ಹೋಗುವವರ ಸಂಖ್ಯೆ ಈಗೀಗ ಇಳಿಮುಖವಾಗುತ್ತಿದೆ. ಬೆಂಗಳೂರಿನಂಥ ನಗರಗಳಲ್ಲಂತೂ ಅದೂ ಕೆಲಸದ ದಿನಗಳಲ್ಲಿ ಮೂರು ಅಬ್ಬಬ್ಬಾ ಎಂದರೆ ನಾಲ್ಕು ಮನೆಗಳನ್ನು ಮುಟ್ಟಬರಲು ಸಾಧ್ಯ. ಅವರು ಇವರು ಈ ಕುರಿತು ರಂಜನೀಯ ರೀತಿಯಲ್ಲಿ ಹೇಳುತ್ತಿದ್ದುದನ್ನು ಕೇಳಿದ್ದ ನನಗೆ ಅದು ಖುದ್ದಾಗಿ ಮನವರಿಕೆ ಆಗಿದ್ದು ಮಗಳ ಮದುವೆಯನ್ನು ನಿಶ್ಚಯ ಮಾಡಿದಾಗಲೇ.

**ಈಮೇಲ್ ಇಲ್ಲವಾಗಿದ್ದರೆ ಒಂದಿಷ್ಟಾದರೂ ರೊಕ್ಕ ಉಳಿಯುತ್ತಿತ್ತು ಎಂಬ ತಿಳುವಳಿಕೆ ಬರಲು ನಾನು ಮಗಳ ಮದುವೆ ಮಾಡಬೇಕಾಯಿತು ಎನ್ನುವುದು ಮಾತ್ರ ಖರೇ ಮಾತು**

ಮಗನ ಮದುವೆಯಾಗಿ ನಾಲ್ಕು ವರ್ಷವಾಯಿತು. ಆ ನಂತರ ಬಂಧೂ ಬಳಗ ಆಪ್ತೇಷ್ಟರು ಹೀಗೆ ಯಾರನ್ನೂ ಕರೆದು ಊಟ ಹಾಕಿಲ್ಲ, ಮಗಳ ಮದುವೆ ಮುಗಿದರೆ ನಾವು ಸಧ್ಯ ಮಾಡುವ ಕಾರ್ಯವೂ ಇಲ್ಲ ಹಾಗಾಗಿ ಈ ಸಲ ನಮ್ಮವರನ್ನೆಲ್ಲ ಖುದ್ದು ಕರೆಯೋಣ ಎಂದ ಹೆಂಡತಿ ಜಯಾಳ ಆಣತಿಗೆ ಗೋಣು ಹಾಕಿದೆ. ಹೆಂಡತಿಯ ಮಾತಿಗೆ ಪ್ರತಿಯಾಡುವುದೂ ಒಂದೇ ಪ್ರವಾಹದ ವಿರುದ್ಧ ಈಜುವುದೂ ಒಂದೇ.

ಖುದ್ದು ಹೋಗಲೇಬೇಕಾದ ಫಸ್ಟ್ ಸರ್ಕಲ್‌ನವರ ಪಟ್ಟಿ ಮಾಡಿದ್ದಾಯಿತು. ಅವರ ವಿಳಾಸವನ್ನು ಮತ್ತೆ ಮತ್ತೆ ಖಾತ್ರಿ ಮಾಡಿ ಕೊಂಡಿದ್ದೂ ಆಯಿತು. ಮದುವೆ ನೆಪದಲ್ಲಿ ತಾಯಿಯ ಮೊಬೈಲ್‌ಗೆ ಮಗ ಸಾವಿರದ ಕರೆನ್ಸಿ ಹಾಕಿಸಿದ. ಬೇಸರ ಮಾಡಿಕೊಳ್ಳಲು ಅವಕಾಶವೇ ಇಲ್ಲದಂತೆ ಜಯಾ ಬಂಧು ಬಳಗಕ್ಕೆ ಸ್ನೇಹ ವಲಯದವರಿಗೆ ಫೋನ್ ಮಾಡಿದ್ದೇ ಮಾಡಿದ್ದು.

ಫಸ್ಟ್ ಸರ್ಕಲ್ ಬಂಧು ಬಳಗದ ಆಚೆಗಿರುವವರ ಫೋನ್ ನಂಬರ್, ಈಮೇಲ್ ಐಡಿ ಸಂಗ್ರಹಿಸಿದ್ದಾಯಿತು. ಆಮಂತ್ರಣ ಪತ್ರ ಬಂದಿದ್ದೇ ತಡ ಅದರ ನಾಲ್ಕೂ ಮೂಲೆಗೆ ಒಂದಿಷ್ಟು ಕುಂಕುಮವನ್ನು ಮೆತ್ತಿದ್ದೂ ಆಯಿತು. ವಿಳಾಸದ ಮನೆಗೆ ಅಂಚೆ ರವಾನೆಯಾಗಿದ್ದೇ ತಡ ಯಾವುದೋ ಒಂದು ಮಂಗಳ ಕಾರ್ಯದ ಆಮಂತ್ರಣ ಬಂದಿದೆ ಎಂದು ಅವರಿಗೆ ಅನಿಸಬೇಡವೇ? ಆಮಂತ್ರಣ ಪತ್ರ ಮುದ್ರಿಸಿಕೊಟ್ಟ ಮುದ್ರಣಾಲಯದವರಿಗೆ ಹೇಳಿ ಆಮಂತ್ರಣದ ಸ್ಕ್ಯಾನ್ ಮಾಡಿಸಿದೆ. ಮದುವೆ ಇನ್ನೂ ಎರಡು ತಿಂಗಳು ಇರುವುದರಿಂದ ಈಗಲೇ ಈಮೇಲ್ ಮಾಡುವುದು ಬೇಡ, ಇನ್‌ಬಾಕ್ಸ್‌ನಲ್ಲಿ ಅದು ಎಲ್ಲೋ ಕಳೆದು ಹೋಗಿರುತ್ತದೆ, ಮತ್ತೆ ಮತ್ತೆ ಕಂಡಿಲ್ಲ ಎಂಬ ಕಾರಣಕ್ಕಾಗಿ ನೋಡಿದ್ದರೂ ಮರೆತು ಹೋಗುವ ಸಂಭವ ಜಾಸ್ತಿ ಎಂಬ ನನ್ನ ಬುದ್ಧಿವಂತಿಕೆಗೆ ಜಯಾ ಮೆಚ್ಚುಗೆ ಸೂಚಿಸಿದಳು.

ಮೊದಲಿಗೆ ಕಾರ್ಡ್‌ಗಳನ್ನು ಪೋಸ್ಟ್ ಮಾಡೋಣ, ತಲುಪಿದ್ದನ್ನು ಫೋನ್ ಮಾಡಿ ಖಚಿತಪಡಿಸಿಕೊಳ್ಳೋಣ ಎಂಬ ತೀರ್ಮಾನಕ್ಕೆ ಬಂದೆವು. ಸ್ಟಾಂಪುಗಳನ್ನು ರಾಶಿ ತಂದಿಟ್ಟು ಕೊಂಡು ಅದಕ್ಕೆಲ್ಲ ಅಂಟು ಮೆತ್ತಿಸುತ್ತ ಕೂರುವ ಬದಲಿಗೆ ಪೋಸ್ಟ್ ಆಫೀಸಿಗೇ ಅವುಗಳನ್ನೆಲ್ಲ ಹೊತ್ತೋಯ್ದು ಅಲ್ಲಿ ಫ್ರಾಂಕಿಂಗ್ ಮಾಡಿಸುವುದೇ ಸರಿ ಎಂಬ ತೀರ್ಮಾನಕ್ಕೆ ಬಂದೆವು. ಹೀಗೇ ಮಾಡುವುದೇ ಸರಿ ಎಂಬ ಸಲಹೆ ಪೋಸ್ಟಲ್ ಇಲಾಖೆಯಲ್ಲೇ ಕೆಲಸ ಮಾಡುವ ನನ್ನ ಅಣ್ಣನ ಮಗಳು ಶೋಭಾಳಿಂದಲೂ ಬಂತು. ಒಟ್ಟಿಗೇ ರಾಶಿ ರಾಶಿ ಕಾರ್ಡ್‌ಗಳನ್ನು ಒಂದೇ ಪೋಸ್ಟ್ ಆಫೀಸಿನಲ್ಲಿ ಕೊಟ್ಟರೆ ವಿಲೇವಾರಿಯಾಗುವುದೇ ಇಲ್ಲ ಎಂಬ ಅನುಮಾನದ ಹುಳುವನ್ನು ಯಾರೋ ಆ ಹೊತ್ತಿಗೆ ನಮ್ಮ ಕಿವಿಯಲ್ಲಿ ಹರಿಯಬಿಟ್ಟರು. ಯಾರದೋ ಮನೆಯ ಮದುವೆಯಲ್ಲಿ ಇಂಥದೊಂದು ಅನಾಹುತವಾಗಿ ಎಷ್ಟೋ ಜನರಿಗೆ ಕಾರ್ಡ್ ಮುಟ್ಟಲೇ ಇಲ್ಲ ಎಂದು ಅಡಬಡ ಕಥೆ ಹೇಳಿ ಸಂಶಯ ಹೆಚ್ಚಿದ್ದನ್ನು ಖಾತ್ರಿಪಡಿಸಿಕೊಂಡು ಸಮಾಧಾನಮಾಡಿಕೊಂಡರು.

ಕಾರ್ಡ್‌ಗಳ ಮೊದಲ ಕಂತು ಪೋಸ್ಟ್ ಆದ ಒಂದು ವಾರದಲ್ಲಿ ಒಬ್ಬರಲ್ಲ ಒಬ್ಬರು ತಮಗೆ ಆಮಂತ್ರಣ ಸೇರಿದ್ದನ್ನು ಖಚಿತಪಡಿಸುತ್ತಾರೆಂದು ದಿನವೂ ಮೊಬೈಲನ್ನು ಎದುರೇ ಇಟ್ಟುಕೊಂಡು ಕಾದೆವು. ಯಾರೂ ಫೋನ್ ಮಾಡಲಿಲ್ಲ, ಕಾಗದ ಬರೆಯುವುದಂತೂ ಮರೆತೇ ಹೋಗಿರುವ ಜಮಾನಾ ಇದು. ಫೋನ್ ಆ ಕಡೆಯಿಂದ ಬರದಿದ್ದರೇನಂತೆ ಈ ಕಡೆಯಿಂದ ಮಾಡಲೇನು ತೊಂದರೆ? ಮಗ ಭರ್ತಿ ಮಾಡಿಸಿದ್ದ ಕರೆನ್ಸಿ ಇದ್ದುದರಿಂದ ಜಯಾಗೆ ಯೋಚನೆಯೇ ಇರಲಿಲ್ಲ.

ಆಟೋದಲ್ಲಿ ಹೋಗುವಾಗ, ಬಸ್‌ನಲ್ಲಿ ಅತ್ತಿತ್ತ ಅಡ್ಡಾಡುವಾಗ, ಕಾರಿನಲ್ಲಿ ಕೂತಾಗ, ಟಿವಿ ಸೀರಿಯಲ್ ನಡುನಡುವೆ ಜಾಹೀರಾತಿನ ಬ್ರೇಕ್ ಸಮಯ ಬಂದಾಗ, ಕುಕ್ಕರ್ ಮೂರು ಸಲ ಕೂಗುವ ಮುನ್ನ ಸಿಗುವ ಬಿಡುವಿನಲ್ಲೆಲ್ಲ ಹೆಂಡತಿಗೆ ಫೋನ್ ಮಾಡುವುದೊಂದೇ ಕೆಲಸ. ಒಬ್ಬೊಬ್ಬರಿಗೇ ಫೋನ್ ಮಾಡಿ ಕಾರ್ಡ್ ಬಂತಾ ಎಂದು ಕೇಳಿದ್ದಾಯಿತು. ಬಂತೆಂಬ ಉತ್ತರ ಮಾತ್ರ ಯಾರಿಂದಲೂ ಬರಲಿಲ್ಲ. ಯಾವಾಗ ಪೋಸ್ಟ್ ಮಾಡಿದಿರಿ, ಯಾವ ಪೋಸ್ಟ್ ಆಫೀಸಿನಲ್ಲಿ ಮಾಡಿದಿರಿ, ಯಾರು ಪೋಸ್ಟ್ ಮಾಡಿದವರು, ಅವರು ಪೋಸ್ಟ್ ಮಾಡಿದ್ದು

ಗ್ಯಾರಂಟಿಯಾ? ಯಾವ ಅಡ್ರೆಸ್ ಬರೆದಿದ್ದೀರೋ... ಎಂಬಂಥ ಕರೆನ್ಸಿ ಖರ್ಚು ಮಾಡಿಸುವ ಪ್ರಶ್ನೆಗಳು ಎದುರಾದವೇ ಹೊರತು ಪತ್ರ ಬಂತೆಂದು ಯಾರೊಬ್ಬರೂ ಹೇಳಲಿಲ್ಲ.

ಪೋಸ್ಟ್ ಆಫೀಸಿನವರು ನಿಜಕ್ಕೂ ಕೈಕೊಟ್ಟಿದ್ದೇ ಹೌದೆಂಬ ತೀರ್ಮಾನಕ್ಕೆ ನಾವು ಗಂಡ ಹೆಂಡತಿ ಬಂದೆವು. ಆದರೆ ಅಷ್ಟರಲ್ಲಿ ಆಗಬೇಕಾದ ಅನಾಹುತ ಆಗಿ ಹೋಗಿತ್ತು. ಮೊದಲ ಕಂತಿನಲ್ಲಿ ಪೋಸ್ಟ್ ಮಾಡದೇ ಉಳಿಸಿಕೊಂಡಿದ್ದ ಕಾರ್ಡ್‌ಗಳನ್ನೂ ಇನ್ನೊಂದು ಪೋಸ್ಟ್ ಆಫೀಸಿಗೆ ಓಯ್ದು ಫ್ರಾಂಕಿಂಗ್ ಗುದ್ದಿಸಿಯಾಗಿತ್ತು. ಅನುಮಾನಂ ಪೆದ್ದ ರೋಗಂ ಎಂದು ಯಾರೋ ಹೇಳಿದ್ದು ನೆನಪಾಯಿತು. ಅದನ್ನು ಬಗೆಹರಿಸಿಕೊಳ್ಳಲು ಪೋಸ್ಟ್ ಆಫೀಸಿಗೇ ಹೋಗಿ ವಿಚಾರಿಸಿದರೆ: ''ಭಯ ಏಕೆ ಒಂದೆರಡು ದಿನ ತಡವಾಗಬಹುದು. ವಿಳಾಸಕ್ಕೆ ವಿಲೇವಾರಿಯಾಗುವುದು ಖಚಿತ, ಅನುಮಾನ ಬೇಡ'' ಎಂದು ಪೋಸ್ಟ್‌ಮಾಸ್ಟರ್ ಅಭಯ ಹಸ್ತ ತೋರಿದರು. ಅಪೀಲ್ ಇರಲಿಲ್ಲ.

ಇಷ್ಟೆಲ್ಲ ವ್ಯವಸ್ಥೆ ಮಾಡಿಕೊಂಡಾಗಿದೆ. ಕಾಗದ ತಲುಪದೆ ಜನ ಬಾರದಿದ್ದರೆ ಮಾಡಿಕೊಂಡ ವ್ಯವಸ್ಥೆಯೆಲ್ಲವೂ ಹೊಳೆಯಲ್ಲಿ ಹೋಮ ಮಾಡಿದಂತಾಗದೇ ಎಂಬ ಒತ್ತಡದಲ್ಲಿ ಹುಟ್ಟಿಕೊಂಡಿದ್ದು ಈಮೇಲ್ ಐಡಿಯಾ. ಹೇಗೂ ಮೇಲ್ ಐಡಿಯನ್ನು ಸಂಗ್ರಹಮಾಡಿತ್ತಲ್ಲ. ಅಂಥವರು ಬಹಳ ಜನರೇನೂ ಇರಲಿಲ್ಲ. ಅವರಿಗೆಲ್ಲ ಈಮೇಲ್ ಮಾಡಿ ಉತ್ತರ ಇಂದು ಬರುತ್ತದೆ ನಾಳೆ ಬರುತ್ತದೆಂದು ಕಾದೆವು. ಯಾವೊಂದು ಮೇಲೂ ಪರತ್ ಬರಲಿಲ್ಲವಾಗಿ ಅವರವರಿಗೆ ತಲುಪಿದೆ ಎನ್ನುವುದು ಖಾತ್ರಿಯಾಗಿತ್ತು.

ಹಾಗಂತ ನಾವು ಸುಮ್ಮನೇ ಕೂರುವುದಾದರೂ ಹೇಗೆ. ಫೋನ್ ಹಚ್ಚಿ ಕೇಳಿದರೆ ಅವರೆಲ್ಲ ಮೇಲ್ ಬಂದಿದೆ ಎನ್ನುವುದನ್ನು ಖಾತ್ರಿಪಡಿಸಿದರು. ಮೇಲ್ ಇಷ್ಟು ಬೇಗ ಕಳಿಸಿದರೆ ಮರೆತೇ ಹೋಗ್ತದ್ರೀ ಮದುವೆ ನಾಲ್ಕೈದು ದಿನವಿದ್ದಾಗ ಕಳಿಸಿದರೆ ನೆನಪಿರುತ್ತದೆ ಎಂದು ತಣ್ಣೀರೆರಚಿದವರೇ ಅನೇಕ. ನಾವು ಮುಖಮುಖ ನೋಡಿಕೊಳ್ಳುವುದರ ಆಚೆಗೆ ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ.

ಮದುವೆ ನಾಲ್ಕೈದು ದಿನವಿದ್ದಾಗ ಮತ್ತೊಮ್ಮೆ ಎಲ್ಲರಿಗೂ ಮೇಲ್ ಮಾಡಿ ಫೋನ್ ಹಚ್ಚಿದರೆ ಹೌದ್ರೀ ಬಂದಿದೆ, ಆದರೆ ಆ ದಿವಸ ಬಹಳ ಕಡೆ ಮದುವೆ ಇದೆ. ಮೊದಲು ಕಳಿಸಿದವರಿಗೆ ಬರ್ತೇವೆ ಎಂದುಬಿಟ್ಟಿದ್ದೇವೆ, ನಿಮ್ಮ ಮಗಳ ಮದುವೆಗೆ ಬರಲಾಗುತ್ತಿಲ್ಲ ಮಕ್ಕಳಿಗೆ ನಮ್ಮ ಆಶೀರ್ವಾದ ತಿಳಸಿಬಿಡಿ ಎನ್ನಬೇಕೇ. ನಾವು ಮೊದಲೇ ಮೇಲ್ ಮಾಡಿದ್ದೆವಲ್ಲ ಮಾರಾಯ್ರೆ ಎಂದಾಗ ಓ ಅದಾ ಮರ್ತೆ ಹೋಗಿದೆ ನೋಡ್ರಿ ಎಂದು ಬಾಯಿ ಮುಚ್ಚಿಸಿದರು.

ಅಲ್ಲಿಂದ ಮುಂದಕ್ಕೆ ನಮ್ಮ ಕೆಲಸ ಎಸ್.ಎಂ.ಎಸ್. ಮಾಡುವುದು. ನೂರಾರು ಮೊಬೈಲ್‌ಗಳಿಗೆ ನನ್ನ ಹಾಗೂ ಜಯಾಳ ಫೋನಿನಿಂದ ಮೆಸೇಜ್ ಕಳಿಸುವುದರಲ್ಲಿ ನಾಲ್ಕು ದಿನ ಕಳೆದೆವು. ಮೆಸೇಜ್ ಡೆಲಿವರ್ಡ್ ಎಂಬ ಸಂದೇಶ ಬಂತು. ಯಾರೂ ಪರತ್ ಮೆಸೇಜ್ ಮಾಡಲಿಲ್ಲ. ನಮಗೆ ಬೇರೆ ಮಾರ್ಗ ಕಾಣಿಸಲೂ ಇಲ್ಲ.

ಈ ಈಮೇಲ್, ಈ ಎಸ್.ಎಂ.ಎಸ್. ಇರದೇ ಇದ್ದಿದ್ದರೆ ಅಂಚೆ ಇಲಾಖೆ ಇಷ್ಟೆಲ್ಲ ನಿಷ್ಫಲವಾಗುತ್ತಿರಲಿಲ್ಲ ಎಂಬ ತೀರ್ಮಾನಕ್ಕೆ ನಾವು ಬಂದೆವು. ಈಮೇಲ್ ಇದೆ,

ಎಸ್.ಎಂ.ಎಸ್. ಇದೆ ಕಾರ್ಡ್ ತಲುಪದೇ ಇದ್ದ ಮಾತ್ರಕ್ಕೆ ಮದುವೆಯೇನೂ ನಿಂತು ಹೋಗೊಲ್ಲ ಎಂಬ ಭಾವನೆ ಆ ಇಲಾಖೆಯಲ್ಲಿ ಬಲವಾಗಿ ಬೇರೂರಿದ್ದು ನಮ್ಮ ಅನುಭವಕ್ಕೆ ಬರುವ ಹೊತ್ತಿಗೆ ಮದುವೆ ದಿನ ಬಂದಿತ್ತು.

ಮನೆಗೆ ಹೋಗಿ ಕರೆದವರಲ್ಲಿ ನಾಲ್ಕೈದು ಕುಟುಂಬ ಹೊರತಾಗಿಸಿ ಉಳಿದವರೆಲ್ಲರೂ ಬಂದರು. ಅನೇಕರು ಡಜನ್‌ಗಟ್ಟಲೆ ಸಂಖ್ಯೆಯಲ್ಲೇ ಬಂದರು. ಆಮಂತ್ರಣ ಪತ್ರದಲ್ಲಿ ಸಕುಟುಂಬ ಸಪರಿವಾರ ಸಹಿತ ಬನ್ನಿ ಎಂದು ನಾವೇನೂ ಅಚ್ಚು ಮಾಡಿಸಿರಲಿಲ್ಲ. ಆದರೂ ಅವರ ಪ್ರೀತಿ, ಬಂದರು. ಅನೇಕರಿಗೆ ಫೋನ್ ಮಾಡಿದ್ದರಿಂದ, ಈಮೇಲ್, ಎಸ್.ಎಂ.ಎಸ್. ಮಾಡಿದ್ದರಿಂದ ಅವರಲ್ಲಿ ಹಲವರು ಬಂದರು. ಈ ಯಾವುದಕ್ಕೂ ಸಿಗದವರು ಮದುವೆಯಾಗಿ ಹತ್ತು ಹದಿನೈದು ದಿನದ ಬಳಿಕ ಫೋನ್ ಮಾಡಿದರು. ನಿನ್ನೆಯಷ್ಟೇ ಮದುವೆ ಪತ್ರ ಬಂತು, ತಡವಾಗಿ ಪೋಸ್ಟ್ ಮಾಡಿದಿರಿ ಅಂತ ಕಾಣಿಸ್ತದೆ. ಮುಂಚೆ ತಲುಪಿದ್ದರೆ ಖಂಡಿತ ಬರ್ತಿದ್ದೆವು ಎಂದರು. ಮದುವೆಗಾದ ಖರ್ಚುವೆಚ್ಚದ ತಪಾಸಣೆಯಲ್ಲಿದ್ದ ನಮಗೆ ಈಗ ಫೋನೂ ಬೇಡ, ಈಮೇಲ್ ಬೇಡ, ಎಸ್.ಎಂ.ಎಸ್. ಅಥವಾ ಪೋಸ್ಟೂ ಬೇಡವಾಗಿತ್ತು.

✵

## ಅತಿಥಿ ದೇವೋ ಭವ

ಕೈಲಾಸಂ ಅವರು ಪಡುಕೋಣೆ ರಮಾನಂದರಾವ್ ಅವರ ಮನೆಯಲ್ಲಿ ಸುಮಾರು 18 ದಿನಗಳ ಕಾಲ ಅತಿಥಿಯಾಗಿದ್ದರಂತೆ. ಜೀನಿಯಸ್ ಆಗಿದ್ದ ಕೈಲಾಸಂ ಅವರಲ್ಲಿ ದಿನದ ಶಿಸ್ತು ಇರಲಿಲ್ಲ. ಹೊತ್ತಿಗೆ ಸರಿಯಾಗಿ ಊಟ, ತಿಂಡಿ, ನಿದ್ದೆ ಮಾಡುತ್ತಿರಲಿಲ್ಲ. ಇದು ಹೋಗಲಿ ಎಂದರೆ ಅವರ ರೂಮನ್ನು ಚೊಕ್ಕಟಗೊಳಿಸಲು ಬಿಡುತ್ತಿರಲಿಲ್ಲ. ಆದರೂ ಪಡುಕೋಣೆಯವರೂ ಅವರ ಶ್ರೀಮತಿಯೂ ಬಹಳ ನಾಜೂಕಾಗಿ ನೋಡಿಕೊಂಡು ಹೊತ್ತು ಹೊತ್ತಿಗೆ ಸರಿಯಾಗಿ ಊಟ ತಿಂಡಿ ಒದಗಿಸಿ ಕೈಲಾಸಂ ಅವರನ್ನು ಸ್ನಾನ ಮಾಡುವಂತೆಯೂ ಒತ್ತಾಯ ಮಾಡುತ್ತಿದ್ದರು. ಕೈಲಾಸಂ ಅವರಿಂದ ಪವಿತ್ರವಾದ ಸ್ನೇಹ ಸೌಹಾರ್ದಗಳನ್ನು ಪಡೆದು ಆನಂದದಿಂದ ಕಾಲ ಕಳೆದರು. ಕೈಲಾಸಂ ಹೊರಟ ಮೇಲೆ ಪಡುಕೋಣೆಯವರ ಶ್ರೀಮತಿಯವರು ನನಗೆ ಆ 18 ದಿನಗಳು ಕೈಲಾಸಂ ಅವರಿಗೆ ಆತಿಥ್ಯ ನೀಡಿ ಒಂದು ಕುರುಕ್ಷೇತ್ರ ಗೆದ್ದ ಅನುಭವ ಆಯಿತು ಎನ್ನುತ್ತಿದ್ದರು.



# ಹರಿಯುವ ಹಣದ ಹೊಳೆ

**- ಆನಂದ**

**'ಕೌ**ನ್ ಬನೇಗ ಕ್ರೋರ್‌ಪತಿ?' ಎಲ್ಲರಿಗೂ ಗೊತ್ತು. ಆದರೆ ಕೌನ್ ಬನಾಯೇಗಾ ಕ್ರೋರ್‌ಪತಿ? ಎಂದರೆ ಉತ್ತರಕ್ಕೆ ತಡಕಾಡಬೇಕಿಲ್ಲ. ಈಮೇಲ್ ಮತ್ತು ಎಸ್.ಎಂ.ಎಸ್.ಗಳು ನಮ್ಮನ್ನು ಆಗಾಗ್ಗೆ ಕ್ರೋರ್‌ಪತಿಗಳನ್ನಾಗಿ ಮಾಡುತ್ತವೆ. ಅಥವಾ ಮಾಡುವ ಆಮಿಷವನ್ನೊಡ್ಡುತ್ತವೆ. ಅದಕ್ಕೆ ಮರುಳಾಗಿ ಕ್ರೋರ್‌ಪತಿಯಾಗುವ ಆಸೆಯಲ್ಲಿ ಲಕ್ಷಗಟ್ಟಲೆ ಕಳೆದುಕೊಂಡಿರುವವರೂ ಇದ್ದಾರೆ.

**ಈಮೇಲ್‌ಗಳ ಮೂಲಕ ನೀವು ಈಗ ಕ್ರೋರ್‌ಪತಿ ಆಗುವುದು ಸುಲಭ**

ಮೊನ್ನೆ ನನಗೊಂದು ಎಸ್.ಎಂ.ಎಸ್. ಬಂದಿತು. ಅದರ ಪ್ರಕಾರ ನನ್ನ ಮೊಬೈಲ್ ನಂಬರ್‌ಗೆ 20 ಲಕ್ಷ ಡಾಲರ್ ಬಹುಮಾನ ನೀಡಲಾಗಿದೆ. ಅದು ಯಾವ ಪುಣ್ಯಾತ್ಮ(ರು) ನನ್ನ ಮೊಬೈಲ್ ನಂಬರನ್ನೇ ಆರಿಸಿಕೊಂಡರು ಎಂಬುದು ನಿಗೂಢ. ಹೀಗೂ ಉಂಟೆ? ಎಂದು ಅಚ್ಚರಿ ಪಡುತ್ತಲೇ ಕಂಪ್ಯೂಟರ್ ಆನ್ ಮಾಡಿದರೆ ನನ್ನ ಇನ್‌ಬಾಕ್ಸ್‌ನಲ್ಲಿ ಒಂದು ಸಂದೇಶ ನನ್ನ ಬರುವಿಗಾಗಿಯೇ ಕಾದು ಕುಳಿತಿತ್ತು. ಅದು ಬಿಬಿಸಿ ಲಾಟರಿಯಿಂದ ಬಂದ ಮಾಹಿತಿ – ಈ ಬಾರಿ ನನ್ನ ಈಮೇಲ್ ಐಡಿ 10 ಲಕ್ಷ ಪೌಂಡ್ ಬಹುಮಾನಕ್ಕೆ ಆಯ್ಕೆಯಾಗಿತ್ತು. ವ್ಹಾ! ಆಗ ಡಾಲರ್, ಈಗ ಪೌಂಡ್‌ಗಳ ಹೊಳೆ. ನನಗೆ ಶುಕ್ರ ದೆಶೆ. ಬಿಬಿಸಿ ಲಾಟರಿ ಚಾರಿಟಿ ಬೊನಾನ್ಜ 2011 ಲಕ್ಷಾಂತರ ಈಮೇಲ್ ಐಡಿಗಳಲ್ಲಿ ನನ್ನನ್ನೇ ಏಕೆ ಆಯ್ಕೆ ಮಾಡಿತು? ಗೊತ್ತಿಲ್ಲ.

ತದನಂತರ ಲಂಡನ್ನಿನ ಲೀ ಫ್ರಾಂಕ್ ಎಂಬ ಮಹಾಶಯ ನನಗೆ ಒಂದು ಸಂದೇಶ ಕಳಿಸಿದರು. ಇವರು ಬಿಬಿಸಿಯವರಲ್ಲ, ಬೇರೆ ಪಾರ್ಟಿ. ಚೀನಾದಲ್ಲಿ ಬ್ಯಾಂಕ್ ಮೇನೇಜರ್ ಆಗಿದ್ದರಂತೆ. ಇವರು ಹತ್ತು ದಶಲಕ್ಷ 750 ಸಾವಿರ ಡಾಲರ್ ಮೊತ್ತದಲ್ಲಿ ಶೇ. 40ರಷ್ಟನ್ನು ನನಗೆ ಕೊಡಲು ತಯಾರಿದ್ದಾರಂತೆ. ಸರಿಯಾದ ಮೊತ್ತ ಎಷ್ಟೆಂದು ನೀವೇ ಲೆಕ್ಕ ಹಾಕಿ.

ಏಕೆಂದರೆ ಅಷ್ಟೆಲ್ಲ ದೊಡ್ಡ ಮೊತ್ತದ ಜೊತೆ ನನಗೆ ವ್ಯವಹಾರ ಮಾಡಿ ಅಭ್ಯಾಸವಿಲ್ಲ. ಇದರಲ್ಲೇನು ಮೋಸವಿಲ್ಲ ಎಂದು ಶ್ರೀ ಫ್ರಾಂಕ್ ನನಗೆ ಆಶ್ವಾಸನೆ ನೀಡಿದ್ದಾರೆ. ಥ್ಯಾಂಕ್ಸ್.

ಇಂಗ್ಲೆಂಡಿನ ಎಸ್‌ಟಿ ಮೈಕ್ರೊ ಎಲೆಕ್ಟ್ರಾನಿಕ್ಸ್ ಕಂಪನಿಯ ಬಗ್ಗೆ ಕೇಳಿದ್ದೀರಾ? ನಾನಂತೂ ಕೇಳಿಲ್ಲ. ಆದರೆ ಇವರು ತಮ್ಮ ವಹಿವಾಟು ವಿಶ್ವದಾದ್ಯಂತ ವಿಸ್ತರಿಸಲು ಅನೇಕ ಯೋಜನೆಗಳನ್ನು ಹಾಕಿದ್ದು ಅದರಲ್ಲಿ ಲಾಟರಿ ಯೋಜನೆ ಸಹ ಒಂದು. ಈ ಲಾಟರಿಯಲ್ಲಿ ನನಗೆ ಎರಡನೆ ಬಹುಮಾನ ಬಂದಿದೆಯಂತೆ. ಛೆ! ಮೊದಲನೆ ಬಹುಮಾನ ತಪ್ಪಿತಲ್ಲ ಎಂದು ದುಃಖವಾದರೂ ನಷ್ಟವೇನಿಲ್ಲ ಬಿಡಿ. ಏಕೆಂದರೆ 2ನೆಯ ಬಹುಮಾನದ ಮೊತ್ತವೇ ಐದುಲಕ್ಷ ಪೌಂಡ್! ಯಾರಿಗುಂಟು ಯಾರಿಗಿಲ್ಲ! ಇದು ನಿಮಗೆ ನಿರಾಸೆ ಮಾಡಿಸಿದ್ದರೆ ಕ್ಷಮಿಸಿ ಎಂದು ಕಂಪನಿಯ ಮಿಸ್ ಕೇಟ್ಸ್ ಎಂಬಾಕೆ ಅವಲತ್ತು ಕೊಂಡಿದ್ದಾರೆ. ಡೋಂಟ್‌ವರಿ, ಮಿಸ್. ಐದು ಲಕ್ಷ ಪೌಂಡ್ ಬೇಕಾದಷ್ಟು.

ನೈಜೀರಿಯಾದ ಯೂನಿಯನ್ ಬ್ಯಾಂಕ್ ನಿರ್ದೇಶಕರಾದ ಜಾನ್ ಎಝೆ ಎಂಬುವರು ಕಳಿಸಿದ ಈ ಮೇಲ್ ಪ್ರಕಾರ ನನ್ನನ್ನು ಸಂಪರ್ಕಿಸಿದ್ದಕ್ಕೆ ಅವರಿಗೆ ತುಂಬಾ ಹೆಮ್ಮೆ ಆಗಿದೆಯಂತೆ. ಹೀಗೆಂದು ಇದುವರೆಗೆ ಯಾರೂ ನನಗೆ ಹೇಳಿರಲಿಲ್ಲ. ಇರಲಿ, ಅವರ ಗೆಳೆಯರೊಬ್ಬರ ಬಳಿ 8,550,000 ಪೌಂಡ್‌ಗಳಿದ್ದು ಇದರಲ್ಲಿ ನನಗೆ 2,550,000 ಪೌಂಡ್‌ಗಳಷ್ಟು ಕೊಡಲು ನಿರ್ಧರಿಸಿದ್ದಾರಂತೆ. ಎತ್ತಣ ನೈಜೀರಿಯಾ? ಎತ್ತಣ ಜಾನ್? ಎತ್ತಣ ಅವರ ಗೆಳೆಯ? ಎತ್ತಣ ನಾನು? ಆದುದರಿಂದಲೇ ಅವರೇ ಹೇಳಿರುವಂತೆ ''ಇದರಿಂದ ನಿಮಗೆ ಆಶ್ಚರ್ಯ ಆಗಬಹುದು. ನೀವು ನಂಬದಿರಲೂಬಹುದು. ಆದರೆ ಇದು ಸತ್ಯ, ವಾಸ್ತವ'' ಎಂದು ವಿವರಿಸಿದ್ದಾರೆ. ನಂಬಲೇಬೇಕಲ್ಲವೆ?

ಅಮೇರಿಕಾದ ಒಬಾಮ ಪ್ರತಿಷ್ಠಾನದ ಸರದಿ ಈಗ. ನನಗಾಗಿ ನೀಡಲು ಅದು ಇಂಗ್ಲೆಂಡಿನ ಎಚ್.ಎಸ್.ಬಿ.ಸಿ. ಬ್ಯಾಂಕ್‌ನಲ್ಲಿ ಐದು ಲಕ್ಷ ಪೌಂಡ್ ಜಮಾ ಮಾಡಿದ್ದು ನಾನು ಅದರ ಎಂ.ಡಿ. ಕಾರವಾನ್ ಮಾರ್ವಿಸ್ ಎಂಬುವರನ್ನು ಸಂಪರ್ಕಿಸಿದರೆ ಸಾಕಂತೆ. ಎಷ್ಟು ಅನಾಯಾಸವಾಗಿ ಹಣ ಬರಲಿದೆ!

ಕೋಕಾಕೋಲ ಕಂಪನಿ ಬಡತನ ನಿರ್ಮೂಲ ಮಾಡಲು ಒಂದು ಯೋಜನೆ ಹಾಕಿದ್ದು – ನಮ್ಮ ರಾಜಕೀಯ ಪಕ್ಷಗಳಂತೆ ಇರಬಹುದೆ? ಅದರಡಿ ನನ್ನ ಈಮೇಲ್‌ಗೆ 7.5 ಲಕ್ಷ ಪೌಂಡ್ ಸಂದಾಯವಾಗಲಿದೆ. ಆದರೆ ನಾನು ಬಡವ ಎಂದು ನನ್ನ ಈಮೇಲ್ ಐಡಿ ನೋಡಿಯೇ ಅವರಿಗೆ ಗೊತ್ತಾಯಿತೆ? ಎಷ್ಟು ಚಾಣಾಕ್ಷರಿರಬೇಕು ಅವರು? ಅಂದರೆ ನನ್ನ ಬಡತನ ಈಗ ನಿರ್ಮೂಲವಾದಂತೆ.

ಆದರೆ ಈ ಲಕ್ಷಾಂತರ ಡಾಲರ್/ಪೌಂಡ್‌ಗಳನ್ನು ಪಡೆಯಲು ನನಗೆ ಹೆದರಿಕೆ. ಇಷ್ಟು ಬಾರಿ ಮೊತ್ತ ನನ್ನ ಸಣ್ಣ ಖಾತೆಗೆ ಜಮಾ ಆದರೆ ನನ್ನ ಬ್ಯಾಂಕ್ ಶಾಖೆಯ ಗತಿ? ಹಾಗೆಯೇ, ನಾನು ಕ್ರೋರ್‌ಪತಿ ಆಗಿದ್ದೇನೆ ಎಂದು ತಿಳಿದ ಕೂಡಲೆ ನನ್ನಿಂದ ದಾನ ಪಡೆಯಲು ನೂರಾರು

ಮಂದಿ ಮನೆಯ ಮುಂದೆ ಜಮಾಯಿಸುವುದು ನನಗೆ ಇಷ್ಟವಿಲ್ಲ. ಶನಿದೇವರ ದೇವಾಲಯ ನಿರ್ಮಾಣ ಮಾಡುವುದೂ ಸೇರಿದಂತೆ, ಹಲವು ಕಾರಣಗಳನ್ನು ನೀಡಿ ದಾನಕ್ಕಾಗಿ ನನ್ನನ್ನು ಪೀಡಿಸುತ್ತಾರೆ. ಅವರನ್ನು ನಿಭಾಯಿಸುವುದು ಹೇಗೆ?

ಆದುದರಿಂದ ನಾನು ಯಾವ ಬಹುಮಾನವನ್ನೂ ಪಡೆಯಲೂ ಹೋಗಿಲ್ಲ. ನನ್ನ ಬ್ಯಾಂಕ್‌ನಲ್ಲಿರುವ ಹಣ ಅಷ್ಟೇ ಇದೆ. ಚೆಕ್ ಪುಸ್ತಕ ಕೊಡುವುದಿಲ್ಲ ಎನ್ನುತ್ತಾರೆ ಬ್ಯಾಂಕ್ ಸಿಬ್ಬಂದಿ.

ನನಗೆಷ್ಟು ನಷ್ಟ ಆಗಿದೆ ಎಂದು ತಿಳಿಯಲು ದಯವಿಟ್ಟು ಲೆಕ್ಕ ಹಾಕಿ – ಒಂದು ಪೌಂಡ್ 80 ರೂಪಾಯಿಗೆ, ಒಂದು ಡಾಲರ್ 54 ರೂಪಾಯಿಗೆ ಸಮ.

## ಗೊರೂರರ ಗರುಡಗಂಬದ ದಾಸಯ್ಯ

ಪ್ರಬಂಧಗಳನ್ನು ನೆನೆಸಿಕೊಂಡಾಗ ಅಲ್ಲಿ ಪ್ರಮುಖವಾಗಿ ನಿಲ್ಲುವುದು ಗೊರೂರು ರಾಮಸ್ವಾಮಿ ಅಯ್ಯಂಗಾರರ ಹೆಸರು. ಅವರ ಗರುಡಗಂಬದ ದಾಸಯ್ಯ ಯಾರೂ ಮರೆಯಲಾರದ ಲೇಖನ. ಇದು ಅವರ ಅನುಭವದ ಒಂದು ಘಟನೆ ಹೀಗಿದೆ. ಗೊರೂರು ಒಂದು ಸಾರಿ ಪಟ್ಟಣಕ್ಕೆ ಹೊರಟಾಗ ಅವರೂರಿನ ದಾಸಯ್ಯ ಸ್ವಾಮಿ ಬರುವಾಗ ನನಗೆ ಒಂದು ಗರುಡಗಂಬ ತಂದ್ಕೊಡಿ. ನಾನಂತೂ ಹೋಗಕ್ಕೆ ಆಗಲ್ಲ. ಈಗ ಇರೋ ಗರುಡಗಂಬ ಹಾಳಾಗಿದೆ ಅಂತ ಬೇಡಿಕೊಂಡಾಗ ಗೊರೂರರು ಆಗಲಿ ಅಂತ ಒಪ್ಪಿಕೊಳ್ಳುತ್ತಾರೆ. ಆದರೆ ಅವರು ಸಂತೆಗೆ ಹೋಗೋದು, ನಂತರ ಊರಿನಲ್ಲಿ ಗರುಡಗಂಬ ಹುಡುಕಿಕೊಂಡು ತಿರುಗೋದು, ಕಡೆಗೂ ಚೌಕಾಶಿ ಮಾಡಿ ಒಂದು ಗರುಡಗಂಬ ಕೊಂಡ್ಕೊಳ್ಳೋದು, ಅಂಗಡಿಯವನು ಇವರನ್ನೇ ದಾಸಯ್ಯ ಅಂದುಕೊಂಡು ಏನೇನೋ ಮಾತಾಡೋದು, ಗರುಡಗಂಬವನ್ನು ರೈಲ್ವೇ ಸ್ಟೇಷನ್ನಿಗೆ ತೆಗೆದುಕೊಂಡು ಹೋಗೋದರಲ್ಲಿ ಕಷ್ಟಪಡೋದು, ಕಡೆಗೆ ರೈಲಿನಲ್ಲಿ ಅದನ್ನು ಇಟ್ಟುಕೊಂಡು ಕೂತಾಗ ಅಕ್ಕಪಕ್ಕದ ಪ್ರಯಾಣಿಕರಿಗೆ ಆಗೋ ತೊಂದರೆ. ಪ್ರಯಾಣಿಕರು ಗೊರೂರರನ್ನೇ ದಾಸಯ್ಯ ಅಂದ್ಕೊಂಡು ಏನೇನೋ ಪ್ರಶ್ನೆಗಳನ್ನು ಕೇಳೋದು ಇವೆಲ್ಲ ತುಂಬಾ ಕುತೂಹಲಕಾರಿಯಾಗಿ ಮೂಡಿಬಂದಿದೆ. ಕಡೆಗೆ ಅವರು ರೈಲ್ವೇ ಸ್ಟೇಷನ್ನಿನಲ್ಲಿ ಇಳಿದು ಗರುಡಗಂಬವನ್ನು ಬಹಳ ಪ್ರಯಾಸ ಪಟ್ಟು ತೆಗೆದುಕೊಂಡು ಹೋಗ್ತಿದ್ದಾಗ ಸ್ಟೇಷನ್ ಮಾಸ್ಟರು, ಇವರು ಟಿಕೆಟ್ ಕೊಟ್ಟರೋ ಇಲ್ಲವೋ ಅಂತ ಯಾರೋ ಅದು ದಾಸಯ್ಯ ಅಂತ ಕೂಗಿದರೆ ಅದುವರೆಗೂ ತಡೆದುಕೊಂಡಿದ್ದ ಸಿಟ್ಟು ನುಗ್ಗಿಬಂದು ಗೊರೂರರು, ಸ್ಟೇಷನ್ ಮಾಸ್ಟರ್ ಕಡೆ ತಿರುಗಿ ಯಾವೋನೋ ದಾಸಯ್ಯ, ನೀನು ದಾಸಯ್ಯ, ನಿಮ್ಮಪ್ಪ ದಾಸಯ್ಯ, ನಿಮ್ಮ ತಾತ ದಾಸಯ್ಯ ಅಂದು ಕೋಪದಿಂದ ಭುಸುಗುಡುತ್ತಾ ಅಲ್ಲಿಂದ ನಡೆಯುತ್ತಾರೆ.

– ದಂನಳ

- ಶಿಕ್ಷಕರ ನೇಮಕಾತಿ ಹಗರಣದಲ್ಲಿ ಜೈಲು ಸೇರಿರುವ ಚೌತಾಲ್ ಸರ್ ಏನು ಕಲಿಯುತ್ತಿರಬಹುದು? – ಎ ಫಾರ್ ಆಪಲ್, ಬಿ ಫಾರ್ ಬೇಲ್, ಸಿ ಫಾರ್ ಕ್ಯಾಶ್/ ಸೆಲ್ ಇತ್ಯಾದಿ?
- ಭಾರತದಲ್ಲಿ ಹೆಣ್ಣು ಗರ್ಭದಲ್ಲೂ ಸುರಕ್ಷಿತವಲ್ಲ; ರಸ್ತೆಯ ಮೇಲೂ ಸಹ.
- ನೀನು ಅಮಿತಾಬ್ ಬಚ್ಚನ್‌ನಂತೆ ಕಂಡರೆ ಸಾಲದು. ಅವರ ಹಾಗೆ ನಟಿಸಲು ಬರಬೇಕು.
- ಹೆಂಡತಿ ರೇಗುತ್ತಿದ್ದರೆ ಏನು ಮಾಡುವೆ? ಎಂದಾಗ ಮನಮೋಹನ್‌ರಂತೆ ಇರುವೆ ಎಂದರೆ ಸುಮ್ಮನಿರುತ್ತೇನೆ ಎಂದರ್ಥ.
- "Friends, Romans and countrymen, please stop looting the country. Especially you Romans."

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನೀನು ನಿನ್ನೆ ಪದವೀಧರನಾಗಿದ್ದು ಇಂದು ಏನೂ ಕಲಿಯದಿದ್ದರೆ ನಾಳೆ ನೀನು ಅನಕ್ಷರಸ್ಥ.
- ಕಾಂಗ್ರೆಸ್ ಗೆಲ್ಲುವ ಅಭ್ಯರ್ಥಿಗಳಿಗೆ ಮಾತ್ರ ಟಿಕೆಟ್ ಕೊಡುವುದಂತೆ. ಆದರೆ ಅದು ಗೆದ್ದ ಮೇಲಷ್ಟೇ ತಾನೆ ಗೊತ್ತಾಗುವುದು?
- ಸೋಷಿಯಲ್ ಮೀಡಿಯ ಇತ್ತೀಚಿನ ಹೊಸ ಕಾವಲುನಾಯಿ. ಅದಕ್ಕೆ ಕಚ್ಚಲೂ ಸಹ ಗೊತ್ತು.
- Think out of box ಎಂದರೆ ಗೊತ್ತು. ಆದರೆ think out of box office ಎಂದರೆ?
- ಒಮ್ಮೆ ಅಕ್ಷರಸ್ಥನಾದವನನ್ನು ಅನಕ್ಷರಸ್ಥನನ್ನಾಗಿ ಮಾಡಲು ಸಾಧ್ಯವಿಲ್ಲ.
- ಸಪ್ಪೆಯೂ ಒಂದು ರುಚಿ.
- ಮದುವೆಯಾಗುವವರೆಗೂ ಹೆಣ್ಣು ತನ್ನ ತಂದೆತಾಯಿ ಜತೆ ಇರುತ್ತಾಳೆ. ನಂತರ ಇನ್ನೊಬ್ಬರ ತಂದೆತಾಯಿ ಜತೆ ಇರುತ್ತಾಳೆ.
- Upper classes are a nation's past. The middle class is its future.
- ಯಾರು ನಿನ್ನನ್ನು ಕೆರಳಿಸುತ್ತಾನೋ ಅವನು ನಿನ್ನನ್ನು ಜಯಿಸುತ್ತಾನೆ.
- ಸಲ್ಮಾನ್ ಖಾನ್ ಅವರನ್ನು ಶರ್ಟ್‌ಲೆಸ್ ವಂಡರ್ ಎಂದು ಕರೆಯಬಹುದೆ?
- You don't go to heaven. You grow to heaven.
- ಗೂಗಲ್ ಬಾಲಕೃಷ್ಣನ ಬಾಯಿ. ಅಲ್ಲಿ ಬ್ರಹ್ಮಾಂಡವೇ ಕಾಣಿಸುತ್ತದೆ.

✵

# ಹಸಿರಾಗದ ನನ್ನ ''ಹಸಿರು'' ಪ್ರಯತ್ನ

**- ನಂದಿನಿ ಕಾಪಡಿ**

**ಆ**ಗಷ್ಟೇ ಹೊಸದಾಗಿ ಅಕೌಂಟೆಂಟ್ ಜನರಲ್ ಆಗಿ ನೇಮಕಗೊಂಡಿದ್ದೆ. ತುಂಬಾ ಉತ್ಸಾಹ, ತುಂಬಾ ಕಾರ್ಯದಕ್ಷತೆ ತೋರಿಸುವ ಆತುರ. ಮುಖ್ಯವಾಗಿ ಸಿಬ್ಬಂದಿ ನಿರ್ವಹಣೆಯ ಬಗ್ಗೆ ತುಂಬಾ ಕಳಕಳಿ.

ಸರಿ, ನನ್ನ ಉತ್ಸಾಹಕ್ಕೆ ತಕ್ಕ ಹಾಗೆ ''ವಿಶ್ವ ಪರ್ಯಾವರಣ, ದಿನ ಮುಂದಿನ ತಿಂಗಳು ವಿಶ್ವದಾದ್ಯಂತ ಆಚರಿಸಲ್ಪಡುತ್ತದೆಂದು ತಿಳಿದೊಡನೇ ನನ್ನ ಬುದ್ಧಿ ಚುರುಕಾಯಿತು.

ಸಿಬ್ಬಂದಿ ವರ್ಗದ ಯೂನಿಯನ್ ಕಾರ್ಯಕಾರಿ ಸಮಿತಿ, ಸ್ಟಾಫ್ ವೆಲ್‌ಫೇರ್ ಸಮಿತಿ ಮತ್ತು ಆಡಳಿತ ಸಮಿತಿಯ ಸದಸ್ಯರೆಲ್ಲರನ್ನೂ ನನ್ನ ಕೋಣೆಗೆ ಬರಮಾಡಿಕೊಂಡೆ. ನಮ್ಮ ಆಫೀಸಿನ ಪರಿಸರ ಈಗ ಸದ್ಯಕ್ಕೆ ಸಮರ್ಪಕವಾಗಿಲ್ಲ. ಮುನಿಸಿಪಲ್ ಕಾರ್ಪೋರೇಷನ್ನಿಗೆ ಹೇಳಿ ಆಫೀಸಿನ ಮುಂದೆ, ಹಿಂದಿರುವ ರಸ್ತೆಗಳನ್ನು ಸ್ವಚ್ಛ ಮಾಡಿಸಬೇಕು. ಆಫೀಸಿನ ತುಂಬಾ ಅಲ್ಲಲ್ಲಿ ಶೇಖರವಾಗಿ ಬಿದ್ದಿರುವ ಹಳೆಯ ರೆಕಾರ್ಡುಗಳನ್ನೆಲ್ಲಾ ಸರಿಯಾಗಿ ವಿಂಗಡಿಸಿ, ಬೇಡವಾದ ಕಾಗದಗಳನ್ನೆಲ್ಲಾ ರಬಾಡಿ ಅಂಗಡಿಗೆ ಮಾರಾಟ ಮಾಡಬೇಕು. ಮಾರುವ ಮುನ್ನ ಐದಾದರೂ ಕನಿಷ್ಠ ಕೊಟೇಷನ್‌ಗಳನ್ನು ತರಿಸಿ, ಎಲ್ಲಕ್ಕಿಂತ ಹೆಚ್ಚು ಕೆ.ಜಿ.ಗೆ ದರ ಕೊಡುವ ಅಂಗಡಿಗೆ ಮಾರಬೇಕು. ಆಫೀಸಿನ ಹಿಂದೆಯೇ ''ಮೀಠಿ'' ನದಿ ತುಂಬಾ ಮಲಿನವಾಗಿದ್ದು ಹರಿಯುತ್ತಿದ್ದರಿಂದ, ಆಫೀಸಿನ ಏಳು ಅಂತಸ್ತುಗಳಲ್ಲೂ ಕಣಿಗಲೆ ಮತ್ತು ಬೇವಿನ ಚಿಕ್ಕಮರಗಳ ಕುಂಡಗಳನ್ನು ಇರಿಸಿ. ಈ ಮೂಲಕ ವಿಷಕಾರಿ ಪರಿಸರವನ್ನು ಆಫೀಸಿನ ಮಟ್ಟಿಗಾದರೂ ಸರಿಪಡಿಸಬೇಕು.... ಇತ್ಯಾದಿ... ಇತ್ಯಾದಿ... ನಿರ್ಧಾರಗಳು ತಯಾರಾದವು.

ಕಡೆಗೆ ನನ್ನ ಮುಖ್ಯ ವಿಷಯಕ್ಕೆ ಬಂದೆ. ವಿಶ್ವ ಪರ್ಯಾವರಣ ದಿನಾಚರಣೆಗೆ ಆಫೀಸಿನ ಪ್ರತಿಯೊಂದು ವಿಭಾಗವೂ ತಮಗೆ ತೋರಿದ ರೀತಿ ತಮ್ಮ ತಮ್ಮ ವಿಭಾಗವನ್ನು ಹಸಿರೀಕರಿಸಬೇಕು. ಅಂದಿನ ದಿನ ಇದರ ಬಗ್ಗೆ ಸ್ಪರ್ಧೆ ನಡೆಯುವುದು. ಎಲ್ಲಕ್ಕಿಂತ ಸಮರ್ಪಕವಾಗಿ ಸುಂದರವಾಗಿ ಹಸಿರೀಕರಿಸಿದ ವಿಭಾಗಕ್ಕೆ ಬಹುಮಾನಗಳು. ಆಫೀಸಿನ ಮಾಲಿಗೆ ಹೇಳಿ ಸುಂದರ ಸಸ್ಯಗಳ ಸಸಿಗಳನ್ನು ತರಿಸಿ ಆಯಾ ವಿಭಾಗಕ್ಕೆ ಬಹುಮಾನ ನೀಡುವುದಾಗಿ ಘೋಷಿಸಿದೆ.

ಸಿಬ್ಬಂದಿ ವರ್ಗದವರು ಸಂತೋಷವಾಗಿಯೇ ಚಹಾ ಹೀರಿ, 'ಮಾರಿ' ಬಿಸ್ಕತ್ತು ಸೇವಿಸಿ ಹೊರಗೆ ನಿರ್ಗಮಿಸಿದರು.

ನಾವು ನಿರ್ಧರಿಸಿದಂತೆ ಎಲ್ಲಾ ಕಾರ್ಯಗಳು ಚೆನ್ನಾಗಿ ನಡೆದವು. ಮುನಿಸಿಪಲ್ ಕಾರ್ಪೋರೇಷನ್ ಕಾರ್ಮಿಕರಿಗೆ ಮನವೊಲಿಸಿ, ಅವರಿಗೆ ಆಫೀಸಿನಲ್ಲಿ ಕ್ಯಾಂಟೀನಿನ ಮೂಲಕ ಹೊಟ್ಟೆ ತುಂಬಾ ತಿಂಡಿ ತಿನ್ನಿಸಿ. ಮತ್ತೆ ಹೊರ ಹೋದ ಮೇಲೆ ''ಚಹಾ ಕುಡಿಯುವುದಕ್ಕಾಗಿ'' ದಕ್ಷಿಣೆ ಕೊಟ್ಟು, ನಮ್ಮ ಆಡಳಿತಾಧಿಕಾರಿ, ಆಫೀಸಿನ ಸುತ್ತ ಮುತ್ತ ಸ್ವಚ್ಛತೆ ತರಿಸಿದರು. ಆಫೀಸಿನ

ಮಾಲಿಯೂ ಉತ್ಸಾಹದಿಂದಲೇ ಕಾಪೌಂಡಿನಲ್ಲಿರುವ ಗಿಡ ಮರಗಳ ಉಸ್ತುವಾರಿ ನೋಡಿಕೊಂಡ. ಗಿಡಗಳ ಸುತ್ತ ಕಟ್ಟೆ ಕಟ್ಟಿಸಿ ಆಕರ್ಷಕವಾಗಿ ಬಣ್ಣ ಕೂಡಾ ಹೊಡಿಸಿದ. ಭೇಷ್! ಭೇಷ್ ಎನ್ನುತ್ತಲೇ ನಾನೂ ಸಹಕರಿಸಿದೆ.

ತುಂಬಾ ವಿಷಕಾರಿ ''ಮೀರಿ'' ನದಿಯ ವಿಷವನ್ನು ಆಫೀಸಿನ ಬಿಲ್ಡಿಂಗಿನಲ್ಲಿ ಹರಡಬಾರದೆಂದು ತರಿಸಿದ ಬೇವಿನ ಸಸಿಗಳು ಒಂದೇ ದಿನದಲ್ಲಿ ಮಾಯಾವಾದವು. ''ಮೇಡಂ... ನಮ್ಮ ಸಹೋದ್ಯೋಗಿಗಳಿಗೆ ಬೇವಿನ ಮರ ಅಶುಭವಂತೆ. ಅದು ಇರುವ ಕಡೆ ದುಷ್ಟ ಶಕ್ತಿಗಳು ಕಾಣಿಸಿಕೊಳ್ಳುತ್ತಾವಂತೆ. ಅದಕ್ಕೇ ಬೇಡವೆಂದರು'' ಎಂದು ಅಳುಕುತ್ತಲೇ ಆಡಳಿತಾಧಿಕಾರಿ ಸಮಜಾಯಿಷಿ ಕೊಟ್ಟರು. ಆ ಗಿಡಗಳು ಮತ್ತೆ ನರ್ಸರಿಗೆ ಸೇರಿಕೊಂಡು ಅವುಗಳ ಪರವಾಗಿ ಹೂಗಿಡಗಳ ಸಸಿಗಳನ್ನು ತರಿಸುವ ಕ್ರಮ ತಾವೇ ತಮ್ಮ ಅಧಿಕಾರದಿಂದ ಕೈಗೊಂಡದ್ದನ್ನೂ ತಿಳಿಸಿದರು! ''ಮೀರಿ'' ನದಿ ನನ್ನ ಕಡೆ ಕಣ್ಣು ಮಿಟುಕಿಸಿತು!

ಕಡೆಗೂ ವಿಶ್ವ ಪರ್ಯಾವರಣ ದಿನ ಬಂದು ಬಿಟ್ಟಿತು. ನಮ್ಮ ಆಫೀಸಿನ ಕಟ್ಟಡಕ್ಕೆ ''ಹಸಿರು ದೀಪಗಳನ್ನು ಹೊದಿಸಿದರೆಂದು'' ಅಂದು ಸಂಜೆ ತಿಳಿಯಿತು. ಅಯ್ಯೋ ಎಷ್ಟೊಂದು ವಿದ್ಯುಚ್ಛಕ್ತಿ ಹಾಳು ಎಂದು ತಲೆ ಚಚ್ಚಿಕೊಂಡದ್ದು ಮಾರನೆಯ ದಿನವೂ ಈ ದೀಪಗಳು ಹಗಲಿನಲ್ಲೂ ಝಗಝಗಿಸಿದಾಗ!

ಆಫೀಸಿನ ಕಾಂಪೌಂಡ್‌ಗೆ ದೊಡ್ಡ ಪುಷ್ಪಾಲಂಕಾರ ಪತ್ರಗಳಿಂದ ಮಾಡಿದ ತೋರಣಗಳು. ಅವೂ ಆಡಳಿತಾಧಿಕಾರಿಯ ''ಅಧಿಕಾರ''ದಿಂದಲೇ ಹೊದಿಸಿದ್ದಂತೆ!

ಮಧ್ಯಾಹ್ನ 12 ಗಂಟೆಗೆ ನನ್ನ ಡಿ.ಎ.ಜಿ. ಒಳ ಬಂದು ''ಮೇಡಂ, ಎಲ್ಲ ವಿಭಾಗಗಳೂ ಸ್ಪರ್ಧೆಗೆ ಸಿದ್ಧರಾಗಿದ್ದಾರೆ ದಯವಿಟ್ಟು ಬನ್ನಿ'' ಎಂದು ಕರೆದೊಯ್ದರು. ಜೊತೆಗೆ ಪೇಪರು ಪೆನ್ನು ತುರುಕಿ ''ಸ್ಪರ್ಧೆಯನ್ನು ಯಾವ ರೀತಿ ಮಾಪನ ಮಾಡಬೇಕೆಂದು'' ಕೇಳಿದರು.

ನಾನು ಡಿ.ಎ.ಜಿ.ಗೆ ''ಅಲ್ಲಾರೀ ನಾವೆಲ್ಲಾ ಆಡಿಟರುಗಳು. ಈ ಸ್ಪರ್ಧೆಗೆ ಬೇಕಾಗಿರುವುದು ಪ್ರತಿ ವಿಭಾಗದ ''ಹಸಿರು ಪ್ರಯತ್ನ'' ಅದಕ್ಕೆ ಮೊದಲ ಸ್ಥಾನ. ಮಿಕ್ಕ ಪಾಯಿಂಟುಗಳನ್ನು ನೀವೇ ಪರ್‌ಫಾರ್ಮೆನ್ಸ್ ಆಡಿಟ್ ಗೈಡ್‌ಲೈನ್‌ಗಳ ಮೂಲಕ ನಿರ್ಧರಿಸಿ'' ಎಂದು ನನ್ನ ''ಆದೇಶ'' ಕೊಟ್ಟೆ.

ನಂತರ ಏಳೂ ಮಹಡಿಗಳನ್ನು ಲಿಫ್ಟ್ ಉಪಯೋಗಿಸದೆಯೇ ಹತ್ತಿ ಇಳಿಯುತ್ತಾ ವಿಭಾಗಗಳನ್ನು ಭೇಟಿ ಮಾಡಿದೆ. ಪ್ರತಿ ವಿಭಾಗದವರೂ ಆಸಕ್ತಿಯಿಂದಲೇ ತಮ್ಮ ತಮ್ಮ ವಿಭಾಗಗಳನ್ನು ಅಲಂಕರಿಸಿದ್ದರು.

ಮೊದಲನೆಯ ವಿಭಾಗದ ತುಂಬಾ ಹಸಿರು ಎಲೆಗಳ ತೋರಣ ಕಟ್ಟಿ ಅಲ್ಲಲ್ಲಿ ಪುಷ್ಪಗುಚ್ಛವಿರಿಸಿದ್ದರು.

ಎರಡನೆಯ ವಿಭಾಗದ ಕಿಟಕಿಯಲ್ಲಿ ಸುಂದರ ಹೂವಿನ ಕುಂಡಗಳನ್ನಿರಿಸಿದ್ದರು. ಪ್ರತಿ ಮೇಜಿನ ಮೇಲೂ ಪುಷ್ಪಗಳ ಸಮಾವೇಷ.....

ಮೂರನೆಯ ವಿಭಾಗ... ವಿಭಾಗಾಧಿಕಾರಿಯಿಂದ ''ಗ್ರೂಪ್ ಡಿ'' ಸಿಬ್ಬಂದಿಯವರೆಗೆ ಎಲ್ಲರೂ ಮಹಿಳೆಯರೇ! ಎಲ್ಲರೂ ಹಸಿರು ಸೀರೆ, ಯೂ ಸಲ್ವಾರ್ ಕಮೀಜು ಧರಿಸಿ ಎಲ್ಲರೂ ಹೂವಿನ ದಂಡೆಗಳನ್ನು ಕೂದಲಿನಲ್ಲಿ ಮುಡಿದುಕೊಂಡಿದ್ದರು! ಪ್ರತಿ ಕಂಪ್ಯೂಟರ್ ಸ್ಕ್ರೀನಿನ ಮೇಲೆ ಹೂವಿನ ವಾಲ್ ಪೇಪರುಗಳು!

ನಾಲ್ಕನೆಯ ವಿಭಾಗ..... ಮಹಿಳೆಯರೆಲ್ಲಾ ಸೇರಿ ''ಹೂವಿನ ರಂಗೋಲಿ'' ರಚಿಸಿದ್ದರು! ಪ್ರತಿ ಮೇಜಿನ ಮೇಲೆ ಹೂಗಳು ರಾರಾಜಿಸುತ್ತಿದ್ದವು! ಭೇಷ್! ಭೇಷ್!

ಐದನೆಯ ವಿಭಾಗ..... ಒಳಗೆ ಹೋದೊಡನೆಯೇ ವಿಭಾಗಾಧಿಕಾರಿ ನಮ್ಮನ್ನು ಕೂರಿಸಿ ''ವಿಶ್ವ ಪರ್ಯಾವರಣ ದಿವಸ''ದ ಮುಖ್ಯತ್ವ, ಯುನೈಟೆಡ್ ನೇಷನ್ನಿನ ಕಾಳಜಿ ಇತ್ಯಾದಿ ಇತ್ಯಾದಿ ಬಗ್ಗೆ ಭಾಷಣ ಕೊಟ್ಟರು! ಆದರೆ ವಿಭಾಗದ ಸುತ್ತ ಒಂದು ಹೂವಾಗಲೀ, ಎಲೆಯಾಗಲೀ ಕಾಣಿಸಲಿಲ್ಲ. ನಮ್ಮ ವಿಭಾಗಾಧಿಕಾರಿಗೆ ಹೂವು ಹಾಗೂ ಎಲೆಗಳ ಅಲರ್ಜಿ'' ಎಂದು ಅವರ ಸಹಕಾರ್ಮಿ ವಿವರಿಸಿದಳು!

ಆರನೆಯ ವಿಭಾಗ..... ಹಸಿರು ಪೇಪರಿನ ತೋರಣಗಳು ಬಣ್ಣಬಣ್ಣದ ಕಾಗದ ಹೂಗಳಿಂದ ಅಲಂಕಾರ. ''ನಮ್ಮ ಮಕ್ಕಳು ಈ ಹೂ ತೋರಣಗಳನ್ನು ಮಾಡಿದ್ದಾರೆ'' ಎಂದು ಮಹಿಳಾ ಅಧಿಕಾರಿ ಹೇಳಿದರು. ''ಓಹ್ ಹೌದೆ? ಭೇಷ್! ಭೇಷ್'' ಎಂದು ನಾನೂ ತಲೆದೂಗಿದೆ!

ಏಳನೆಯ ವಿಭಾಗ..... ಹಸಿರು ಪ್ಲಾಸ್ಟಿಕ್ ಗಿಡಗಳು ಪ್ರತಿ ಮೇಜಿನ ಮೇಲೆ ಪ್ಲಾಸ್ಟಿಕ್ ಹೂಗಳ ಗೊಂಚಲುಗಳು! ದೇವ ದೇವಾ!

ಮುಂದೆ ನೋಡುವಂತಹುದು ಏನೂ ಇರಲಿಲ್ಲ. ವಾಪಸ್ಸು ಕೋಣೆಗೆ ನಾವೆಲ್ಲರೂ ಬಂದೆವು. ಡಿ.ಎ.ಜಿ.ಯ ಸನ್ನೆಯ ಮೇರೆಗೆ ಕ್ಯಾಂಟೀನ್ ಸಿಬ್ಬಂದಿ ನಮ್ಮೆಲ್ಲರಿಗೂ ಹಸಿರು ಬಣ್ಣ ಹಾಕಿ ಮಾಡಿದ ''ಹರಾ ಭರಾ ಕಬಾಬ್'' ಮತ್ತು ಹಸಿರು ಬಣ್ಣ ಸೇರಿಸಿ ಮಾಡಿದ ಬರ್ಫಿ ಇರಿಸಿದ ಪ್ಲೇಟುಗಳನ್ನು ಸರಬರಾಜು ಮಾಡಿದ. ಕುಡಿಯಲು ಹಸಿರು ಬಣ್ಣದ ಪೇಯ ಕೊಟ್ಟರೆಂದು ಹೇಳಬೇಕಿಲ್ಲವಲ್ಲ!

ಈ ಹಸಿರು ಪ್ರಯತ್ನ ಸತತವಾಗಿ ನಡೆಯಲಿ! ಆದರೆ ಪ್ಲಾಸ್ಟಿಕ್ ಮತ್ತು ಪೇಪರಿನ ಹೂಗಳು ಬೇಡವೆಂದು ಸ್ವಲ್ಪ ಮೆತ್ತಗೆಯೇ ಸಿಬ್ಬಂದಿ ವರ್ಗದವರಿಗೆ ಹೇಳಿದೆ!

ಮುಂದಿನ ವರ್ಷ ''ಪರ್ಯಾವರಣ ದಿನಾಚರಣೆ'' ಮಾಡಲಿಲ್ಲವೆಂದು ಹೇಳಬೇಕಿಲ್ಲ ತಾನೆ?

ಅಂದ ಹಾಗೆ ನಮ್ಮ ಆಫೀಸಿನ ''ಹಸಿರು ಪ್ರಯತ್ನ''ದ ಬಗ್ಗೆ ಮಾರನೆಯ ದಿನ ವೃತ್ತಪತ್ರಿಕೆಗಳಲ್ಲಿ ಸುದ್ದಿಯಾಗಿ ಎಲ್ಲರೂ ನನ್ನನ್ನು ಹೊಗಳಿ ಕೊಂಡಾಡಿದರು! ಅಲ್ಲಿಗೆ ನನ್ನ ಪ್ರಯತ್ನ ಹಸಿರಾಯಿತು!

# ಕಸ ಆನ್ ಲೈನ್


- ಆರತಿ ಘಟಿಕಾರ, ದುಬೈ

**ಸ**ರಸೂ.. ಇಲ್ ಕೇಳೇ ಇನ್ನು ಕಸದ ಸಮಸ್ಯೆ ಪರಿಹಾರವಾಗುತ್ತಂತೆ ಕಣೆ..! ಇವರು ಕೈಯಲ್ಲಿ ಎರಡು ಕಸದ ಬುಟ್ಟಿ ಹಿಡಿದು ಮನೆ ಒಳಗಡೆ ಅಡಿ ಇಡುತ್ತಾ ಹೇಳಿದರು. ಕಸದ ವಿಷಯ ಬಂದ ತಕ್ಷಣ ರಸಂ ಮಾಡುತ್ತಿದ್ದವಳು ಹೊರಗೋಡಿ ಬಂದೆ. ನಮ್ಮ ಮನೆಯ ಮುಂದಿನ ರಾಶಿ ಕಸ ವಾರಗಟ್ಟಲೆ ವಿಲೇವಾರಿ ಆಗದೆ, ಈ ದುರ್ನಾತಕ್ಕೆ ನಮ್ಮ ಮೂಗು ಒಗ್ಗಿ ಹೋಗುವ ಪರಿಸ್ಥಿತಿ ಬಂದಿತ್ತು. ಇನ್ನು ಫಿನಾಯಿಲ್, ಉಪ್ಪಿನಕಾಯಿ, ಪ್ಲಾಸ್ಟಿಕ್ ಡಬ್ಬ ಮಾರೋ ಸೇಲ್ಸ್ ಹುಡುಗಿಯರು, ಅನಾಥಾಶ್ರಮ, ಮಣ್ಣು ಮಸಿ ಅಂತ ಚಂದ ಎತ್ತುವವರು ನಮ್ಮ ಮನೆಯ ಆಲ್ಸೇಷಿಯನ್ ನಾಯಿಗೂ ಹೆದರದೆ ಆಗಾಗ ಬಂದು ಕಾಡುತ್ತಿದ್ದವರು ಈ ವಾಕರಿಕೆ ಬರಿಸುವ ಕಸದ ದುರ್ನಾತಕ್ಕೆ ಹೆದರಿ ನಮ್ಮ ಮನೆ ಕಡೆ ಹಾಯ್ದಿರಲಿಲ್ಲ. ಇನ್ನು ಇದು ಸಾಲದು ಅಂತ ನಮ್ಮ ಮನೆಯ ಓಣಿಯ ಎದುರಿನ ಚರಂಡಿಯ ವಾಲ್ವ್ ಒಡೆದು ಇದರಿಂದಲೂ ಗಬ್ಬುನಾಥ ಬೇರೆ. ಹೀಗಾಗಿ ಈ ಕಾಕ್ಟೇಲ್ ವಾಸನೆಗೆ ನಮಗೆ ಡ್ರಿಂಕ್ಸ್ ಹಾಕದೇ ತಲೆ ತಿರುಗಿ ಬೀಳುವಂತೆ ಅಮಲೇರುತ್ತಿತ್ತು. ಇನ್ನು ಪಾಪ ಓಣಿಯ ಜನರು ಹೊರತಾಗಿ ಹೊರಗಿನವರು ಬರಲೇಬೇಕಾದ ತುರ್ತು ಪರಿಸ್ಥಿತಿ ಇದ್ದರಷ್ಟೆ ಈ ಕಡೆ ಹಾಯುವ ಧೈರ್ಯ ಮಾಡಿದರು.

ನನ್ನ ಯೋಚನೆಗೆ ಕಡಿವಾಣ ಹಾಕುತ್ತಾ ಏನ್ರೀ ಅದು ಏನೋ ಕಸ ವಿಲೇವಾರಿ ಬಗ್ಗೆ ಹೇಳ್ತಾ ಇದ್ದರಲ್ಲ, ಸ್ವಲ್ಪ ಸರಿಯಾಗಿ ಹೇಳ್ರೀ ಅಂತ ಗೋಗರೆದೆ. ಇವರು ಬಾಯಿ ತೆರೆಯುವಷ್ಟರಲ್ಲಿ ನನ್ನ ಫೋನು ರಿಂಗಣಿಸಿತು. ಆ ಕಡೆಯಿಂದ ನನ್ನ ತಂಗಿ ಮಗ ಶ್ರೀಕಾಂತು ಧ್ವನಿಗೆ ನನ್ನ ಮುಖದಲ್ಲಿ 70 ಎಂ.ಎಂ. ಸ್ಮೈಲ್ ನೋಡಿಯೇ ಇವರು ಊಹಿಸಿಬೇಕು ನನ್ನ ಆತ್ಮೀಯರದೇ ಕರೆ ಅಂತ. ಚೆನ್ನಾಗಿದೀರಾ ಚಿಕ್ಕಮ್ಮ, ಮಾವ ಹೇಗಿದ್ದಾರೆ ಅಂತೆಲ್ಲ ಕುಶಲೋಪರಿಗಳಾದಮೇಲೆ ಮುಖ್ಯ ಪ್ರಶ್ನೆಗೆ ಬಂದ. ''ಚಿಕ್ಕಮ್ಮ ನಿಮ್ಮ ಮನೆ ಎದುರುಗಡೆ ಕಸ ಎಲ್ಲಾ ವಿಲೇವಾರಿ ಆಯ್ತಾ?'' ಅಂತ. ನಾನು ''ಯಾಕಪ್ಪಾ ಶ್ರೀಕಾಂತು, ಹಾಗೆ ಕೇಳ್ತಾ ಇದೀಯ?'' ಅಂತ ಕಸಿವಿಸಿಯಿಂದಲೇ ಸವಾಲೆಸೆದೆ. ''ಏನಿಲ್ಲ ಚಿಕ್ಕಮ್ಮ, ನನ್ನ ಮಗನ ಉಪನಯನದ ಆಮಂತ್ರಣ ನಿಮಗೆ ಕೊಟ್ಟು ಹೋಗೋಣ ಅಂತ ಅಂದ್ಕೊಂಡಿದೀವಿ. ಇನ್ನೂ ಕಸ ಹಾಗೇ ಇದ್ದರೆ ದಯವಿಟ್ಟು ಕ್ಷಮಿಸಿ ಇಲ್ಲೇ ಫೋನಲ್ಲೇ ಕರೆದುಬಿಡ್ತೀನಿ. ಯಾಕಂದ್ರೆ ನನಗೆ ಕಸ, ಧೂಳು ಅಂದ್ರೆ ಕೆಮ್ಮು. ಇನ್ನು ನನ್ನ ಹೆಂಡ್ತಿ ಸೀತೆ ನಿಮಗೆ ಗೊತ್ತಲ್ಲ ದಮ್ಮು, ಹಾಗಾಗಿ ಆ ಕಡೆ ಬಂದ್ರೆ ಎರಡೂ ಜಾಸ್ತಿ ಆಗುತ್ತೆ, ಅದಕ್ಕೆ'' ಅಂದ. ನಾನು ನಿಟ್ಟುಸಿರಿಡುತ್ತಾ ''ಆಯ್ತಪ್ಪ ಹಾಗೇ ಮಾಡು. ಕಸ ಎಲ್ಲ ಖಾಲೀ ಆಗಿ ಕ್ಲೀನ್ ಮಾಡಿದ್ಮೇಲೆ ನಾನೇ ಫೋನ್ ಮಾಡ್ತೀನಿ ಆಗ ಸಂಸಾರ ಸಮೇತ ಬಂದು ಹೋಗು'' ಅಂದು ಫೋನ್ ಕುಕ್ಕಿ ''ಥೂ, ಏನ್ರೀ ಇದು ಈ ಹಾಳು ಕಸ ನಮ್ಮ ಮಾನ ಮರ್ಯಾದೆ ಎಲ್ಲಾ ತೆಗೀತಾ ಇದೆಯಲ್ಲ, ಇನ್ನೂ ಎಷ್ಟು ದಿನ ಅಂತ ಈ ನಾಯಿಪಾಡು. ಈ ಕಸದ ಸಮಸ್ಯೆ ಬಗೆ ಹರಿಸ್ಲಿಕ್ಕೆ ಪಾಲಿಕೆ ಸೂಕ್ತ ಕ್ರಮ ತಗೋತೀವಿ ಅಂತ

ಹೇಳ್ತಾ ಇದ್ಯಲ್ಲ, ಅದೇನು ಕ್ರಮಾನೋ ಕರ್ಮಾನೋ ಅಥವಾ ಕಮಾನೋ ಗೊತ್ತಿಲ್ಲ. ಆದರೆ ಇದು ಮಾತ್ರ ಸೂತಕ ಕ್ರಮ ಆಗಬಾರದು ಅಷ್ಟೆ. ಇನ್ನು ಈ ಮೇಯರು / ಕಾರ್ಪೊರೇಟರುಗಳು ಏನು ನಿದ್ದೆ ಮಾಡ್ತಾ ಇದಾರಾ? ತಮ್ಮ ಏರಿಯಾದ ಕಾರ್ಪೊರೇಟರ್ ಮನೆ ಮುಂದೆ ಜನ ತಮ್ಮ ತಮ್ಮ ಮನೆಯ ಕಸ ತಂದು ಸುರಿದು ಪ್ರತಿಭಟನೆ ಮಾಡಬೇಕು ಕಣ್ರಿ ಆಗ ಗೊತ್ತಾಗುತ್ತೆ. ಇನ್ನು ಆ ಮಂಡೂರಿನ ಜನ ಇಲ್ಲಿ ಕಸ ಹಾಕಬೇಡಿ ಅಂತ ಮಂಡಿಯೂರಿ ಕೇಳಿಕೊಳ್ಳುತ್ತಿದ್ದಾರೆ. ಅವರು ಕಸದ ಲಾರಿ ಕಂಡ್ರೆ ಸಾಕು ಕೆಂಡ ಕಾರಿ ಲಾರಿಗಳ ಮೇಲೆ ಕಲ್ಲೆಸೆದು ಪಾಲಿಕೆ ನೌಕರರ ಮೇಲೂ ಹಲ್ಲೆ ನಡೆಸಿ ಓಡಿಸ್ತಾ ಇದಾರಂತೆ. ಅದೇನೋ ಈಗ ಮುಂಜಾಗ್ರತಾ ಕ್ರಮ ಅಂತ ಕಸದ ಲಾರಿಯ ಜೊತೆ ರಕ್ಷಣೆಗೆ ಅಂತ ಪೋಲೀಸ್ ವ್ಯಾನ್ ಬೇರೆ ಕೇಡು. ಇನ್ನು ಇವರಿಗೂ, ಮೋದಿ, ಜಯಲಲಿತಾ ಇವರಂತೆ ಝೆಡ್ ಕ್ಯಾಟಗರಿ ರಕ್ಷಣೆ ಕೊಡೋ ದಿನಗಳು ಬಂದರೂ ಬರಬಹುದು. ಕಸ ಹಾಕಲು ಏನು ಕಸರತ್ತು ಛೆ ಛೆ. ಅಲ್ಲಾರೀ ಈ ಹಾಳು ಕಸದ ಮೇಲೆ ಮಳೆ ಸುರಿದು ಸೊಳ್ಳೆಗಳು ತಾಂಡವವಾಡ್ತಾ ಇವೆ. ಇನ್ನು ನಮಗೂ ಡೆಂಗೂ ಜ್ವರ ಬಂದು ಕಸ ವಿಲೇವಾರಿ ಆಗೋ ಬದಲು ನಮ್ಮ ವಿಲೇವಾರಿ ಆಗಿಬಿಟ್ರೆ ಅಂತ ಭಯ ಷುರುವಾಗಿಬಿಟ್ಟಿದೆ. ರೀ ಅಂತೂ ಜನಸಾಮಾನ್ಯರ ಈ ಕಸದ ಸಮಸ್ಯೆ ಈ ಸರ್ಕಾರಕ್ಕೆ ಕಾಲು ಕಸ ಆಗಿ ಹೋಗಿದೆ. ರೀ ನಂಗೊಂದು ಕೈಲಾಸಂ ಜೋಕು ನೆನಪಾಗ್ತಾ ಇದೆ. ಏನ್ ಗೊತ್ತಾ ಅವರ ಮನೆಗೆ ಒಬ್ಬ ಅಪರಿಚಿತ ಹೋದ್ನಂತೆ, ಕೈಲಾಸಂ ರೂಮಿನಲ್ಲಿ ತುಂಬಾ ಕಸ ಇತ್ತಂತೆ. ಥೂ ಇದೇನ್ ಸಾರ್ ಇಷ್ಟೊಂದು ಕಸ ಅಂತ ಕೇಳಿದ್ದಕ್ಕೆ ಕೈಲಾಸಂ ಅವರು ಅವನ ಕಡೆ ನೋಡಿ ಯೂ ನೋ ದ ಡೆಫನಿಷನ್ ಆಫ್ ಕಸ, ಲಿಸನ್ ಟು ಮಿ, ಯಾವ ವಸ್ತು ಎಲ್ಲಿ ಇರಬಾರದೋ ಅದು ಅಲ್ಲಿ ಇದ್ರೆ ಅದು ಕಸ ಫಾರ್ ಎಕ್ಸಾಂಪಲ್ ಯೂ ಇನ್ ಮೈ ರೂಮು ಅಂದ್ರಂತೆ. ಹಾಗೆ ಈ ಸರ್ಕಾರ ಅಧಿಕಾರದಲ್ಲಿರಬಾರದು ಆದರೂ ಅದು ಇದೆ, ಅದಕ್ಕೆ ಅದೇ ಕಸ. ಈ ಕಸಕ್ಕಿಂತ ಆ ಕಸವನ್ನು ಮೊದಲು ವಿಲೇವಾರಿ ಮಾಡಬೇಕು ಕಣ್ರೀ'' — ಅಂತ ಇನ್ನೂ ಏನೇನೂ ಬಡಬಡಿಸ್ತಾ ಇದ್ನೋ ನಾನು, ಅಷ್ಟರಲ್ಲಿ ಅವರು ನನ್ನನ್ನು ತಡೆದು ''ಅಯ್ಯೋ ಸರಸು, ಇದರ ಬಗ್ಗೆನೇ ನಿನಗೆ ಹೇಳ್ಬೇಕು ಅಂತ ಬಂದಿದ್ದು. ಇಲ್ ನೋಡು ಇನ್ಮೇಲೆ ಪಾಲಿಕೆ ಆಧುನಿಕ ತಂತ್ರಜ್ಞಾನ ಬಳಸಿ ಕಸ ವಿಲೇವಾರಿನ ಹೈಟೆಕ್ ಮಾಡ್ತಾರಂತೆ. ಪೇಪರಿನಲ್ಲಿ ಸುದ್ದಿ ಬಂದಿದೆ ಕಣೆ. ಬೆಂಗಳೂರಿನ ಯಾವ ಏರಿಯಾದಲ್ಲಿ ಕಸದ ರಾಶಿ ಕಂಡರೂ ಪಾಲಿಕೆ ಅಧಿ ಕಾರಿಗಳು ಅದನ್ನು ಆನ್ ಲೈನ್ ಮೂಲಕವೇ ನೋಡಬಹುದಂತೆ. ನೋಡಿದ ತಕ್ಷಣ ಅವರು ಅಲ್ಲಿಗೆ ಗಾಡಿ ಕಳಿಸಿ ಕಸ ಎಲ್ಲಾ ವಿಲೇವಾರಿ ಮಾಡ್ಸಿಬಿಡ್ತಾರಂತೆ'' ಅಂದರು. ನನಗೆ ಒಟ್ಟಿನಲ್ಲಿ ಕಸದ ದುರ್ನಾತಕ್ಕೋ ಅಥವಾ ಇವರು ಹೇಳಿದ್ದನ್ನು ನಂಬಲಾಗದೆ ಮೂಗಿನ ಮೇಲೆ ಬೆರಳು ಅಲ್ಲ ಕರ್ಚೀಫು ಇಟ್ಟುಕೊಳ್ಳುವಂತಾಯಿತು. ಅದಕ್ಕೆ, ನಾನು ''ಅಯ್ಯೋ ಬಿಡಿ ಇದೆಲ್ಲ ಆಗಲ್ಲ, ಹೋಗಲ್ಲ, ಈ ಅಧಿಕಾರಿಗಳಿಗೆ ಕಸದ ರಾಶಿಯ ಮಾಹಿತಿ ಜೊತೆಗೆ ಅದರ ಫೋಟೋ ಕೂಡಾ ಆನ್ ಲೈನಲ್ಲಿ ಬಂದು ಹಾಗೇ ಕಸದ ದುರ್ನಾತವೂ ಆನ್ ಲೈನಲ್ಲೇ ಬಡಿಬೇಕು ಕಣ್ರೀ ಆಗ ಕೂಡಲೇ ಏನಾದರೂ ಕ್ರಮ ತಗೊಳ್ತಾರೆ ಅನಿಸುತ್ತೆ'' ಅಂತ ಸಿಟ್ಟು ಮಾಡಿಕೊಂಡೆ.

✵




**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ನಮ್ಮೂರಾಗೆ ನಾವೇ ಪರಕೀಯರು...

**- ಎಚ್. ಗೋಪಾಲಕೃಷ್ಣ**

**ಅ**ದೊಂದು ಅತಿಥಿ ಗೃಹ. ಕಾಡಿನ ಮಧ್ಯೆ ಬಿಡುಬೀಸಾಗಿ ಅದು ಯಾರೋ ಯಾವ ಕಾಲದಲ್ಲಿಯೋ ಕಟ್ಟಿಸಿದ್ದು. ಅಲ್ಲಿಗೆ ಜನರು ಬರೋದೂ ಕಡಿಮೆ. ಅಪರೂಪಕ್ಕೆ ಯಾರಾದರೂ ನವದಂಪತಿಗಳೋ ಅಥವಾ ಸರ್ಕಾರಿ ಕಛೇರಿಯವರೋ ಬಂದು ಒಂದೆರೆಡು ದಿವಸಗಳಿದ್ದು ಮೋಜು ಮಾಡಿ ಹೋಗುವ ಜಾಯಮಾನದವರೇ ಹೆಚ್ಚು. ಸುತ್ತಲೂ ಹಸಿರಿನ ಪರಿಸರ, ಸುತ್ತಲೂ ಪೊದೆ ಕಾಡು, ಹತ್ತಿರದಲ್ಲಿ ಎರಡು ಮೂರು ಮೈಲಿ ದೂರದಲ್ಲಿ ಹಳ್ಳಿಗಳು. ಹತ್ತಿರದಲ್ಲಿಯೇ ಹರಿಯುತ್ತಿರುವ ಸಣ್ಣ ತೊರೆ... ಅದರ ಸುತ್ತಲೂ ಬಂದು ಕೂರುವ ಕೊಕ್ಕರೆಗಳು, ಬೆಳ್ಳಕ್ಕಿಗಳು, ಆಗಾಗ ಇಲ್ಲಿನ ನೀರು ಕುಡಿಯಲು ಬರುವ ಹಸು ದನಗಳು..... ನೀಲಿ ಆಕಾಶ, ಅಲ್ಲಿ ಹಾರಾಡುತ್ತಿರುವ ಪಕ್ಷಿಗಳು.... ನಗರದವರಿಗೆ ಅಪರೂಪ ಎನಿಸುವ ಪರಿಸರ!

ಮನೆ ನಿರ್ಮಿಸಿದ ಹೊಸತರಲ್ಲಿ ಯಜಮಾನರ ಕಡೆಯವರು ಬಂದು ಕೆಲವು ದಿವಸ ಇದ್ದು ಹೋಗುತ್ತಿದ್ದರಾದರೂ ಕ್ರಮೇಣ ಜನಾಕರ್ಷಣೆ ಕಡಿಮೆಯಾಗುತ್ತಾ ಬಂದಿದ್ದು ಈಗ ಜನ ಬರುವುದೂ ಅಪರೂಪ ಮತ್ತು ಯಾರಾದರೂ ಬಂದರೂ ಇರುವ ಸೌಕರ್ಯಗಳು ಸಾಲದೇ ಗೊಣಗಾಟವೇ ಜಾಸ್ತಿ. ಇದನ್ನು ನೋಡಿಕೊಳ್ಳಲು ಒಬ್ಬ ಮಾಲಿ, ಅವನೂ ಹತ್ತಿರದ ಹಳ್ಳಿಯಿಂದ ಬರಬೇಕು. ಜನ ಇಲ್ಲದಿರುವ ಸಮಯದಲ್ಲಿ ಒಮ್ಮೆ ಬಂದು ಕಸ ಗುಡಿಸಿ ನೀರು ಎರಚಿ ಹೋದನೆಂದರೆ ಮತ್ತೆ ಮಾರನೇ ದಿವಸವೇ ಅವನ ಭೇಟಿ.

ಈ ಅತಿಥಿ ಗೃಹಕ್ಕೆ ನನ್ನ ಗೆಳೆಯ ಒಮ್ಮೆ ಹೋಗಿ ಅಲ್ಲೇ ಒಂದೆರೆಡು ವಾರ ವಾಸ್ತವ್ಯ ಹೂಡುವ ಪರಿಸ್ಥಿತಿ ಉದ್ಭವವಾಗಿತ್ತು. ಅಲ್ಲಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿನ ಜಾನುವಾರು ಸಮೀಕ್ಷೆ ನಡೆಸಲು ಇವನನ್ನು ನಿಯೋಜಿಸಿದ್ದರು. ಅರೆ ಸರ್ಕಾರಿ ಸೇವಾಸಂಸ್ಥೆಯಲ್ಲಿ ಇವನು ಕೆಲಸ ಮಾಡುತ್ತಿದ್ದವನು. ಯುವಕ ಹೊಸಾಜಾಗಗಳನ್ನು ನೋಡಬೇಕು ಹೊಸ ಜನರ ಸಂಪರ್ಕ ಇರಬೇಕು ಅನ್ನುವ ಕಾಳಜಿ ಇದ್ದವನು. ಉತ್ಸಾಹದಿಂದಲೇ ಕೆಲಸ ಒಪ್ಪಿಕೊಂಡು ಸುತ್ತಮುತ್ತಲಿನ ಸ್ಥಳಗಳ ಬಗ್ಗೆ ಮಾಹಿತಿ ದೊರಕಿಸಿಕೊಂಡ. ಹಳ್ಳಗಳಲ್ಲಿ ಇವನು ಉಳಿದುಕೊಳ್ಳಲು ಯೋಗ್ಯ ಜಾಗ ಇಲ್ಲ ಅಂತ ತಿಳಿದ ನಂತರ ತುಂಬಾ ಹಿಂದೆ ಈ ಜಾಗದಲ್ಲಿ ಉಳಿದುಕೊಂಡಿದ್ದ ಒಬ್ಬರು ಇವನಿಗೆ ನೆನಪಿನಿಂದ ಅತಿಥಿ ಗೃಹದ ವಿವರ ನೀಡಿದ್ದರು. ಸಂಬಂಧಿಸಿದವರನ್ನು ಸಂಪರ್ಕಿಸಿ ಈ ಮನೆ ಕಾಯ್ದಿರಿಸಿದವನು ಸಂಜೆ ವೇಳೆಗೆ ಬಂದ. ಇವನನ್ನೇ ಕಾಯುತ್ತಿದ್ದ ಮಾಲಿ ಬೀಗದ ಕೈ ಇವನ ಹತ್ತಿರ ನೀಡಿ ಮನೆ ಒಂದು ಸುತ್ತು ಹಾಕಿಸಿ ಅಲ್ಲಿ ದೊರಕಬಹುದಾದ ಸವಲತ್ತುಗಳ ವಿವರ ನೀಡಿ ಹೊರಡಲಾ? ಅಂತ ಕೇಳಿದ.

ರಾತ್ರಿ ಊಟಕ್ಕೆ....? ನನ್ನ ಗೆಳೆಯ ಆಗಲೇ ಕಂಗಾಲಾಗಿದ್ದ. ರಾತ್ರಿಯ ಊಟದ ವ್ಯವಸ್ಥೆ ಬಗ್ಗೆ ಮಾಲೀನ ಕೇಳಿದ.

ನೀವು ಏನೂ ತಂದಿಲ್ವಾ ಬುದ್ದೀ? ಇಲ್ಲಿ ಬರೋರೆಲ್ಲಾ ಅದರ ವ್ಯವಸ್ಥೆ ಮಾಡಿಕೊಂಡೇ ಬರ್ತಾರೆ....

ಅಯ್ಯೋ ನನಗೆ ಇದು ಗೊತ್ತಿರಲಿಲ್ಲವಪ್ಪಾ... ಸುತ್ತಾ ಮುತ್ತಾ ಹಳ್ಳೀಲಿರೋ ಹಸು ಪಸು ಲೆಕ್ಕ ಮಾಡೋಕ್ಕೆ ಬಂದಿರೋನು ನಾನು...

ಸರಿ ಬುದ್ದಿ ನಾನೇ ಊಟ ತಿಂಡಿ ನೋಡ್ಕೋತೀನಿ...

ಅಂತ ಹೇಳಿದ ಮಾಲಿ ಮತ್ತೆ ಹಳ್ಳಿಗೆ ಹೋಗಿ ಇವನಿಗೆ ರಾತ್ರಿ ಊಟದ ಚಿಂತೆ ಬಗೆ ಹರಿಯುವಂತೆ ಮಾಡಿದ. ಬೆಳಿಗ್ಗೆ ಅವನ ಮನೆಯಿಂದಲೇ ನಾಷ್ಟ ತಂದಿತ್ತ. ಫ್ಲಾಸ್ಕಿನಲ್ಲಿ ಕಾಫಿ ತಂದಿಡಲಾ ಅಂತ ಕೇಳಿ ಅದನ್ನೂ ತಂದಿಟ್ಟ.

ವಾರ ವಾರ ಲೆಕ್ಕ ಹಾಕಿ ಮಾಲಿ ಮಾಡುತ್ತಿದ್ದ ಖರ್ಚುಗಳನ್ನು ಇವನು ನೀಡುತ್ತಿದ್ದ. ಕೆಲವು ಸಲ ಜ್ಯಾಸ್ತಿ ಚಾರ್ಜು ಮಾಡ್ತಿದ್ದನಾ ಅಂತ ಸಂಶಯ ಬರೋದಂತೆ. ಈ ಕಾಡಿನಲ್ಲಿ ಇಷ್ಟಾದರೂ ಸಿಕ್ತಾ ಇದೆಯಲ್ಲಾ ಅಂತ ಅದು ಹೇಗೋ ಸೈರಿಸಿಕೊಂಡನಂತೆ.

ಎರಡು ತಿಂಗಳು ಗೆಳೆಯ ಅಲ್ಲಿ ಉಳಿದುಕೊಂಡು ಅವನ ಪೂರ್ತಿ ಕೆಲಸ ಮುಗಿಸಿದ.

ಒಟ್ಟಿನಲ್ಲಿ ಇವನ ಜೀವನ ಅಲ್ಲಿ ಅಷ್ಟೇನೂ ತೊಂದರೆ ಇಲ್ಲದ ಹಾಗೆ ಆ ಮಾಲಿ ನೋಡಿಕೊಂಡನಂತೆ.

ಕೆಲಸ ಮುಗಿಸಿದ ನಂತರ ಇವನು ಊರಿಗೆ ಹೊರಡುವ ಹಿಂದಿನ ದಿವಸ ಮಾಲೀನ ಕರೆದು ಕೂಡಿಸಿಕೊಂಡ. ಕೊನೇ ಬಿಲ್ಲನ್ನ ಚುಕ್ತಾ ಮಾಡಿದ.

ಚೆನ್ನಾಗಿ ನೋಡಿಕೊಂಡೆಯಪ್ಪಾ ನನ್ನನ್ನ ಅಂತ ಥ್ಯಾಂಕ್ಸ್ ಹೇಳಿದ – ತಗೋ ಅಂತ ಕೊಂಚ ಭಕ್ಷೀಸೂ ನೀಡಿದ. ಈ ಗೆಸ್ಟ್ ಹೌಸನ್ನ ಇಂಪ್ರೂವ್ ಮಾಡೋಕ್ಕೆ ಸರಕಾರಕ್ಕೆ ಬರೀತಿದ್ದೀನಿ, ನಿಂದೇನಾದರೂ ಸಲಹೆ ಇದೆಯಾ ಅಂತ ಕೇಳಿದ.

ಬುದ್ದಿ ಒಂದು ಮಾತು ಹೇಳಲಾ?

ಹೇಳು ಅದೇನು?

ಬುದ್ದಿ ಇಂಗೇಳ್ತೀನಿ ಅಂತ ಬೇಜಾರು ಮಾಡ್ಕೋಬೇಡ್ರೀ, ನಮ್ಮ ಸೋದರಮಾವನ ಊರಲ್ಲಿ ಆಗಿದ್ದು ನಿಮಗೆ ಹೇಳ್ತೀನಿ... ಅಲ್ಲಿ ಹಿಂಗೇ ಆಗಿದ್ದು...

ನೀವು ಇಂತಾ ಇಂಪ್ರೂಮೆಂಟು ಮಾಡಬೇಕು ಅಂತ ಸರ್ಕಾರಕ್ಕೆ ಬರೀತೀರಿ, ನಿಮ್ಮ ಉದ್ದೇಶವೂ ಒಳ್ಳೇದೇನೇ... ಅದಕ್ಕೇ ಬರೀತೀರಿ. ಸರ್ಕಾರ ಜನನ್ನ ನೇಮಕ ಮಾಡುತ್ತೆ. ಅಲ್ಲಿಂದ ಒಂದು ದಂಡು ಬರುತ್ತೆ ಸುತ್ತ ಮುತ್ತ ಜಾಗ ನೋಡುತ್ತೆ. ಇಷ್ಟು ಪಸಂದಾಗಿರೋ ಜಾಗ ನೋಡಿರೋಲ್ಲ ಅವರು. ಸರ್ಕಾರಕ್ಕೆ ಏನೂ ವೃದ್ದಿ ಮಾಡೂದು ಬೇಡ ಅಂತ

ಬರೀತಾರೆ, ಅವರಲ್ಲೇ ಒಬ್ಬ ಆಮೇಲೆ ಇಲ್ಲಿಗೆ ಬರ್ತಾನೆ. ಇಡೀ ಜಾಗ ಅವರು ಕೊಂಡ್ಕೊತಾರೆ, ಕಾಡು ಕಡಿದು ಹಾಕ್ತಾರೆ, ಮನೆಗಳನ್ನ ಗುಡಿಸಲು ತರಹ ಕಟ್ತಾರೆ ಅದಕ್ಕೊಂದು ದೊಡ್ಡ ಕಾಂಪೌಂಡು ಹಾಕ್ತಾರೆ, ಈಜುಕೊಳ ಕಟ್ಟಿಸ್ತಾರೆ, ಒಂದು ನಗರವೇ ಬಂದುಬಿಡುತ್ತೆ. ನಮ್ಮ ಶಾಂತಿ ಹಾಳಾಗುತ್ತೆ. ಪ್ರತಿ ವಾರದ ಕೊನೆಗೆ ಇಲ್ಲಿ ಹಿಂಡು ಹಿಂಡು ಜನ ಬರ್ತಾರೆ. ನಮ್ಮ ಹುಡುಗರು ಹಿಂಡಿನ ಜನ ಮಾಡಿದ ಹಾಗೇ ಮಾಡುಕ್ಕೆ ಹೋಗುತ್ವೆ....

ಆಮೇಲೆ ನಮ್ಮನ್ನ ಇಲ್ಲಿಂದ ಒಕ್ಕಲೆಬ್ಬಿಸ್ತಾರೆ, ಅವರು ರೆಸಾರ್ಟು ಪಸಾರ್ಟು ಅಂತ ಮಾಡ್ಕೋತಾರೆ... ನಾವು ಮನೆ ಮಠ ಕಳಕೊಂಡು ಅಬ್ಬೇಪಾರಿಗಳಾಗಿ ಬಿಡ್ತೀವಿ ಬುದ್ದಿ... ಅಪರೂಪಕ್ಕೆ ನಿಮ್ಮಂಥೋರು ಬಂದಾಗ ಒಂದು ನಾಲ್ಕು ಕಾಸು ನೋಡ್ತೀವಿ ಬುದ್ದಿ, ಆಮೇಲೆ ಅದಕ್ಕೂ ಕಲ್ಲು, ನಮ್ಮೂರಾಗೆ ನಾವೇ ಪರಕೀಯರಾಗ್ತೀವಿ....

ದಯವಿಟ್ಟು ಏನೂ ಬರೀಬೇಡಿ ಬುದ್ದಿ, ನಮ್ಮನ್ನ ಬದುಕೋಕ್ಕೆ ಬಿಟ್ಟರೆ ಅಷ್ಟೇ ಸಾಕು.... ನಮ್ಮೂರಾಗೆ ನಾವೇ ಪರಕೀಯರಾಗೋದು ಬೇಡ ಬುದ್ದೀ...

ಗೆಳೆಯ ಅಲ್ಲಿಂದ ವಾಪಸ್ಸು ಬಂದಮೇಲೆ ಇವನಿಗೆ ವಹಿಸಿದ್ದ ಕೆಲಸ ಮಾತ್ರ ಮಾಡಿ ಮುಗಿಸಿಕೊಟ್ಟು ತೆಪ್ಪಗಾದ – ಏನೂ ವರದಿ ಕೊಡಲಿಲ್ಲವಂತೆ!

✵



**ನಿಮ್ಮ ಈ ಮೇಲ್ ಚೆಕ್ ಮಾಡಬೇಕಿತ್ತು. ನಿಮ್ಮನ್ನು ಫೈರ್ ಮಾಡಿ ಮೂರು ವಾರಗಳೇ ಆಗಿದೆ.**

# ಜುಗ್ಗಾನಂದ ಸ್ವಾಮಿ

(ಹಾಸ್ಯ ಪ್ರಹಸನ)

**- ಬೇಲೂರು ರಾಮಮೂರ್ತಿ**

**ಸು**ಬ್ಬಣ್ಣ ಪೇಪರ್ ಓದ್ತಾ ಕೂತಿದ್ದಾನೆ. ಸೈಡ್‌ವಿಂಗ್‌ನಿಂದ ಬಾಬು ಓಡೋಡಿ ಬಂದು ಅವನ ಮೇಲೇ ಬಿದ್ದಾಗ ಸುಬ್ಬಣ್ಣ ಛೇರಿನಿಂದ ಕೆಳಗೆ ಬೀಳ್ತಾನೆ.

ಬಾಬು ಅಯ್ಯೋ ಪ್ರಾಣ ಹೋಗ್ತಾ ಇದೆ ಏನಾದ್ರೂ ತಿನ್ನಕ್ಕೆ ಕೊಡಯ್ಯ, ಹಾಳಾದ್ದು ನಿಮ್ಮನೆ ಹತ್ರ ಯಾವ ಅಂಗಡೀನೂ ತೆಗೆದಿಲ್ಲ ಯಾವ ಹೋಟೆಲ್ಲೂ ತೆಗೆದಿಲ್ಲ (ಹಸಿವಿನಿಂದ ಒದ್ದಾಡ್ತಾನೆ).

ಸುಬ್ಬಯ್ಯ ತಿನ್ನಕ್ಕೆ ಏನಾದ್ರೂ ಕೊಡಬೇಕಾ. ಯಾಕೆ ಬೆಳಗಿಂದ ಏನೂ ತಿಂದಿಲ್ವ? ಏನ್ ಕಥೆ ನಿನ್ದು.

ಬಾಬು ಕಥೆ ಹೇಳೋ ಟೈಮೂ ಅಲ್ಲ, ಕಥೆ ಕೇಳೋ ಟೈಮೂ ಅಲ್ಲ ಇದು. ಇದೇನಿದ್ದರೂ ತಿನ್ನೋ ಟೈಮು ಸುಬ್ಬಯ್ಯ ನಿನ್ನ ದಮ್ಮಯ್ಯ ಅನ್ತೀನಿ ತಿನ್ನೋಕೆ ಏನಾದ್ರೂ ಕೊಡೊ (ಹೊಟ್ಟೆ ಹಿಡಿದುಕೊಂಡು ಗೋಳಾಡಿಕೊಂಡು ಬೇಡ್ತಾನೆ).

ಸುಬ್ಬಯ್ಯ ತಿನ್ನೋಕಾ, ನಮ್ಮನೇಲಿ ಏನಿದೇಂತ ಬಂದ್ಯೋ ನನ್ನ ಹೆಂಡ್ತಿ ಊರಿಗೆ ಹೋಗಿ ಒಂದು ವಾರ ಆಯ್ತು. ಅವಳು ಎಲ್ಲೆಲ್ಲಿ ಏನೇನು ಇಟ್ಟಿರ್ತಾಳೆ ಅಂತ ಅವಳಿಗೇ ಗೊತ್ತಿರೋಲ್ಲ, ಇನ್ನು ನನಗೇನು ಗೊತ್ತಿರುತ್ತೆ. ಅಷ್ಟಕ್ಕೂ ಅರ್ಜೆಂಟಾಗಿ ತಿನ್ನೋಂಥದೇನಾಗಿದೆ.

ಬಾಬು ಹಸಿವು ಕಣಯ್ಯ ಹಸಿವು. ಯಾಕೆ ಸತಾಯಿಸ್ತೀಯೋ ನಡಿ ಅಡಿಗೆ ಮನೆ ತೋರಿಸು ಅಲ್ಲೇನಿದೆಯೋ ಅದನ್ನೇ ತಿಂದುಬಿಡ್ತೀನಿ. ಇಲ್ದಿದ್ರೆ ನಾನು ಸತ್ತೇ ಹೋಗ್ತೀನಿ.

ಸುಬ್ಬಯ್ಯ ಸುಮ್ನಿರಯ್ಯ ಹಸಿವಿನಿಂದ ಯಾರೂ ಸಾಯೋಲ್ಲ, ಗಾಂಧೀಜಿ ಎಷ್ಟು ದಿವಸ ಉಪವಾಸ ಮಾಡಿದಾರೆ ಆದರೂ ಹಸಿವಿನಿಂದ ಅವರು ಸಾಯಲಿಲ್ಲ, ನಮ್ಮ ರಾಜಕಾರಣಿಗಳು ಆಗಾಗ ಉಪವಾಸ ಮಾಡ್ತಾನೆ ಇರ್ತಾರೆ.

ಬಾಬು ಅಯ್ಯೋ ಕಂತೆ ಪುರಾಣ ಎಲ್ಲ ಬೇಡಯ್ಯ, ನನಗೆ ಹಸಿವು ಹತ್ತಿ ಪ್ರಾಣ ಹೋಗ್ತಿದೆ ಏನಾದ್ರೂ ಕೊಡಯ್ಯ ತಿನ್ನಕ್ಕೆ.

ಸುಬ್ಬಯ್ಯ ಅದ್ಸರಿ ರಾತ್ರಿ ನೀನು ಊಟ ಮಾಡಿಲ್ವ. ಒಂದು ಪಕ್ಷ ಮಾಡಿದ್ರೆ ಇನ್ನು ಏಳು ದಿವಸ ಏನೂ ತಿನ್ನದೇ ಇರಬಹುದು ಗೊತ್ತಾ. ಒಂದು ಸಿದ್ಧಾಂತ ಏನು ಹೇಳುತ್ತೆ ಅಂದ್ರೆ....

ಬಾಬು ಸಿದ್ಧಾಂತದ ಮನೆ ಹಾಳಾಯ್ತು (ಹೊಟ್ಟೆ ನೀವಿಕೊಂಡು) ಊಟಕ್ಕೆ ಸಿದ್ಧವಾಗಿ ಬಂದಿದೀನಿ ಹೊಟ್ಟೆಗೆ ಏನಾದ್ರೂ ಹಾಕಯ್ಯ.

ಸುಬ್ಬಯ್ಯ ಒಂದು ಹೂಜಿ ನೀರು ಕೊಟ್ಟುಬಿಡ್ಲಾ? ಕುಡಿದು ಸುಧಾರಿಸಿಕೊ.

ಬಾಬು ನೀರಿನಿಂದ ಏನಾಗುತ್ತೆ. ಬೀರ್ ಇದ್ರಾದ್ರೂ ಕೊಡಯ್ಯ. ಇನ್ನೈದೇ ನಿಮಿಷ ಟೈಮ್ ಇರೋದು ಅಷ್ಟರಲ್ಲಿ ನಾನು ಏನಾದರೂ ತಿನ್ನದೇ ಹೋದರೆ ಸತ್ತೇ ಹೋಗ್ತೀನಿ.

ಸುಬ್ಬಯ್ಯ ನಮ್ಮಲ್ಲಿ ಒಂದು ಗಾದೆ ಇದೆ ಏನೊಂದ್ರೆ ಅತ್ತು ಹೆದರಿಸಿದೋನೊಬ್ಬ, ಹೇತು ಹೆದರಿಸಿದೋನೊಬ್ಬ ಅಂತ. ಹಾಗೆ ನೀನು ಸಾಯ್ತೀನಿ ಅಂತ ಹೆದರಿಸ್ತಿದೀಯ. ಸಾಯಯ್ಯ ಅದ್ಹೇಗೆ ಸಾಯ್ತೀಯ ಅಂತ ನಾನೂ ನೋಡೇಬಿಡ್ತೀನಿ.

ಬಾಬು ಬೇಡಯ್ಯ, ಒಬ್ಬ ಹಸಿದ ಪ್ರಾಣೀನ ಕೊಂದ ಪಾಪಕ್ಕೆ ಯಾಕೋ ಗುರಿಯಾಗ್ತೀಯ. ಯಾರನ್ನಾದರೂ ಕರೆದು ಒಂದು ತುಂಡು ಬ್ರೆಡ್ಡಾದ್ರೂ ತರಿಸಿಕೊಡೋ...

ಸುಬ್ಬಯ್ಯ ಒಳ್ಳೆ ಕಥೆ ಆಯ್ತಲ್ಲ ನಿನ್ದು. ಮನೇಲಿ ಬೇರೆ ಯಾರೂ ಇಲ್ಲ. (ಅಷ್ಟರಲ್ಲಿ ಸುಬ್ಬಯ್ಯನ ಮಗ ಪರಮ ಬರ್ತಾನೆ) ಪರಮಾ ಬಾರೋ ಒಳ್ಳೆ ಸಮಯಕ್ಕೆ ಸರಿಯಾಗಿ ಬಂದೆ. ಹೋಗಿ ಈ ಅಂಕಲ್‌ಗೆ ಏನಾದ್ರೂ ತಿನ್ನಕ್ಕೆ ತಗೊಂಬಾ.

ಪರಮ ಅಂದ್ರೆ, ಈ ಅಂಕಲ್ಲು ಏನು ಬೇಕಾದ್ರೂ ತಿಂತಾರಾ.

ಬಾಬು ಹೌದಪ್ಪ, ಈಗ ಆ ಪರಿಸ್ಥಿತೀಲೇ ಇದೀನಿ. ಬೇಗ ಏನಾದ್ರೂ ತಂದುಕೊಡೋ.

ಪರಮ ಅಪ್ಪಾ ನಮ್ಮನೆ ಮುಂದೆ ಹಸು ಸಗಣಿ ಹಾಕಿದೆ ಅದನ್ನೇ ತಂದುಕೊಡ್ಲಾ.

ಬಾಬು ಸಗಣಿ ತಿನ್ನೋಕಾಗುತ್ತೇನೋ. ಮನುಷ್ಯರು ತಿನ್ನೋಂಥದೇನಾದ್ರೂ ತಾರೋ.

ಪರಮ ಮತ್ತೆ ಏನು ಬೇಕಾದ್ರೂ ತಿನ್ತೀನಿ ಅಂದ್ರಿ.

ಸುಬ್ಬಯ್ಯ ಹಸಿದವರಿಗೆ ಹಾಗೆಲ್ಲ ತಮಾಷೆ ಮಾಡಬಾರದು. ಹೋಗು ಬಾಳೆ ಹಣ್ಣೋ, ಬ್ರೆಡ್ಡೋ ಏನಾದ್ರೂ ತಗೊಂಬಾ.

ಪರಮ ಬಾಳೆ ಹಣ್ಣು ಅಂದ್ರೆ ಯಾವ್ದು ಪಚ್ಚಬಾಳೆ ಹಣ್ಣಾ, ಪುಟ್ಟಬಾಳೆ ಹಣ್ಣಾ, ರಸಬಾಳೆ ಹಣ್ಣಾ ಎಷ್ಟು ತರಬೇಕು. ಒಂದಾ, ಒಂದು ಡಜನ್ನಾ, ಒಂದು ಗೊನೇನಾ.

ಬಾಬು ಏನು ಪ್ರಶ್ನೆ ಕೇಳ್ತಾನಯ್ಯಾ, ಹೋಗು ಎಷ್ಟಾದ್ರೂ ತಗೊಂಬಾರೋ.

ಸುಬ್ಬಯ್ಯ ಒಂದು ಡಜನ್ ತಗೊಂಬಾ. ಅವನು ತಿಂದು ಮಿಗಿಸಿದರೆ ನಮಗಾಗುತ್ತೆ. ಹಾಗೇ ಬ್ರೆಡ್ಡೂ ತಂದುಬಿಡು.

ಪರಮ ಬ್ರೆಡ್ಡು ಅಂದ್ರೆ ಯಾವುದು? ಬೇಕರೀದಾ? ಕಂಪನೀದಾ? ಯಾವ ಬ್ರಾಂಡು?

ಬಾಬು ಇವನು ಕೇಳೋ ಪ್ರಶ್ನೆ ನೋಡಿದರೆ ನಾನು ಸತ್ತ ಮೇಲೆ ಇವನು ಬಾಳೆಹಣ್ಣು ಬ್ರೆಡ್ಡು ತರೋದು ಅನಿಸ್ತಿದೆ (ಹೊಟ್ಟೆ ಹಿಡಿದುಕೊಂಡು ಒದ್ದಾಡ್ತಾನೆ). ಅಯ್ಯೋ ತಿನ್ನೋಕೆ ಏನಾದ್ರೂ ಕೊಡ್ರೋ ನನ್ನನ್ನು ಯಾಕೆ ಸಾಯಿಸ್ತಿದೀರೋ.

ಸುಬ್ಬಯ್ಯ ಪರಮ ನೀನು ಬ್ರೆಡ್ಡು ಬಾಳೆ ಹಣ್ಣು ತಗೊಂಬಾ ಹೋಗು. (ಹೋಗು ಅನ್ನೋದನ್ನು ಮತ್ತೆ ಈಗಲೇ ಹಿಂದಕ್ಕೆ ಬರಬೇಡ ಅನ್ನುವಂತೆ ಸಂಜ್ಞೆ ಮಾಡಿ ಹೇಳಬೇಕು).

ಪರಮ ಹಾಗೇ ಆಗ್ಱ಼ಪ್ಪ ನಾನು ಹೋಗ್ತೀನಿ (ಹೊರಡುತ್ತಾನೆ).

ಬಾಬು ಹೋಗ್ತೀನಿ ಅನ್ನಬೇಡ್ವೋ ಹೋಗಿ ಬಾಳೆ ಹಣ್ಣು ಬ್ರೆಡ್ಡು ತರ್ತೀನಿ ಅನ್ನೋ.

ಸುಬ್ಬಯ್ಯ ನಮ್ಮ ದೇಶದಲ್ಲಿ ದಿನಾಗಲೂ ಹಸಿವಿನಿಂದ ಸಾಯೋರು ತುಂಬಾ ಇದಾರೆ. ಅವರ ಪಟ್ಟಿಗೆ ಇನ್ನೊಂದು ಹೆಸರು ಸೇರುತ್ತೆ ಅಷ್ಟೆ. ಈಗ ಒಂದು ಅಧ್ಯಯನದ ವರದಿ ಪ್ರಕಾರ ಈ ಜನ್ಮದಲ್ಲಿ ಹಸಿವಿನಿಂದ ಸತ್ತವರು ಮುಂದಿನ ಜನ್ಮದಲ್ಲಿ ಪರಮ ವೇದಾಂತಿಯಾಗಿ ಹುಟ್ತಾರಂತೆ.

ಬಾಬು ಮುಂದಿನ ಜನ್ಮದ ಮನೆ ಹಾಳಾಯ್ತು ಈ ಜನ್ಮದ್ದು ಹೇಳೋ. ಹಸಿವಿನಿಂದ ಒದ್ದಾಡ್ತೋ ಹಾಗೆ ಆಗ್ತಾ ಇದೆ. ಏನಾದ್ರು ಕೊಟ್ಟು ಪುಣ್ಯ ಕಟ್ಕೊಳೊ.

ಸುಬ್ಬಯ್ಯ ಸನ್ಯಾಸಿಗಳು ಹೇಳೋ ಪ್ರಕಾರ ನಮ್ಮ ದಿಟ್ಟ ಮನಸ್ಸಿನಿಂದ ಹಸಿವು, ನಿದ್ದೆ ಬಾಯಾರಿಕೆ ಎಲ್ಲವನ್ನೂ ಕಂಟ್ರೋಲ್ ಮಾಡಬಹುದಂತೆ. ಸ್ವಲ್ಪ ನೀನೂ ಟ್ರೈ ಮಾಡು.

ಬಾಬು ನಾನು ಸನ್ಯಾಸಿ ಅಲ್ವಲ್ಲಯ್ಯ. ನನಗೆ ಅವೆಲ್ಲ ಗೊತ್ತಾಗೋಲ್ಲ. ಅಯ್ಯಾ ಸುಬ್ಬಯ್ಯ ಏನಾದ್ರು ಕೊಡೊ ಹಸಿವು ಹೊಟ್ಟೆಗೆ. ಹೊಟ್ಟೆ ಬೆನ್ನಿಗೆ ಅಂಟ್ಕೊತಾ ಇದೆ ಕಣೋ.

ಸುಬ್ಬಯ್ಯ ಹೌದಾ, ಫೆಂಟಾಸ್ಟಿಕ್. ಆಮೇಲೆ ನಿನ್ನ ಸೊಂಟ ಕೂಡಾ ಮಾಧುರಿ ದೀಕ್ಷಿತ್, ಐಶ್ವರ್ಯ ರೈ, ಕರೀನಾ ಕಪೂರ್ ಸೊಂಟದ ಹಾಗಾಗುತ್ತೆ. ಆಮೇಲೆ ನಿನ್ನ ಸೊಂಟಕ್ಕೂ ಒಳ್ಳೆ ಡಿಮ್ಯಾಂಡ್ ಬರುತ್ತೆ. ಅದಿಕ್ಕೇ ಹೇಳೋದು ಆಗೊದೆಲ್ಲ ಒಳ್ಳೇದಕ್ಕೇ ಅಂತ.

ಬಾಬು ಒಣವೇದಾಂತ ಸಾಕು ಮಾಡೋ, ಮನೇಲಿ ಅಕ್ಕಿ ಇದೆಯೇನೋ. ಕೊಡೋ ಅದನ್ನೇ ಒಂದಿಷ್ಟು ಬಾಯಿಗೆ ಹಾಕಿಬಿಡು ತಿಂದುಬಿಡ್ತೀನಿ.

ಸುಬ್ಬಯ್ಯ ಅಕ್ಕಿ ಏನೋ ಇದೆ. ಆದ್ರೆ ಅದು ಸತ್ತ ಮೇಲೆ ಹಾಕೋದಲ್ವ. ಬದುಕಿರೋರ ಬಾಯಿಗೆ ಅಕ್ಕಿ ಹಾಕಬಾರದಂತೆ ಅಂತ ನಮ್ಮಜ್ಜಿ ಹೇಳ್ತಿದ್ಲು. ಒಂದ್ಸಾರಿ ನಮ್ಮಜ್ಜ..

ಬಾಬು ನಿಮ್ಮಜ್ಜಿ ಮನೆ ಹಾಳಾಯ್ತು ನನ್ನ ಕಥೆ ಹೇಳಯ್ಯ. ಈಗ ನೀನು ಏನಾದ್ರೂ ತಿನ್ನೋಕೆ ಕೊಡ್ತೀಯೋ ಇಲ್ಲಾ ನಾನು ಇಲ್ಲೇ ಬಿದ್ದು ಸತ್ತುಹೋಗ್ಱಲೋ.

ಸುಬ್ಬಯ್ಯ ಸತ್ತುಹೋಗು ಆದ್ರೆ ಇಲ್ಲಿ ಬೇಡ. ಹಾಗೂ ಹೀಗೂ ನಮ್ಮನೆಯಿಂದ ಆಚೆ ಹೋಗಿ ಸಾಯಿ. ಇಲ್ಲಿದ್ರೆ ಪೊಲೀಸ್ ಕೇಸು ಅದೂ ಇದೂ ಅಂತ. ಅಲ್ಲಯ್ಯ ನಮ್ಮ ದೇಶದಲ್ಲಿ ದಿನಾಗ್ಱ಼ಲೂ ಜನ ನೂರಾರು ಸಮಸ್ಯೆ ಇಟ್ಕೊಂಡು ಒದ್ದಾಡ್ತಾ ಇದಾರೆ. ಅಂಥಾದ್ರಲ್ಲಿ ನೀನು ನಿನ್ನ ಹಸಿವನ್ನೇ ಒಂದು ದೊಡ್ಡ ಸಮಸ್ಯೆ ಅಂದ್ಕೊಂಡು ಒದ್ದಾಡ್ತಾ ಇದೀಯಲ್ಲ ನೋಡು.

ಬಾಬು ನಿನ್ನ ಪುರಾಣ ನಿಲ್ಲಿಸ್ತೀಯೋ ಇಲ್ವೋ.

ಸುಬ್ಬಯ್ಯ ನಾನು ಹೇಳೋದು ಏನೊಂದ್ರೆ ಮನುಷ್ಯನಿಗೆ ಬರೋ ಯಾವ ಸಮಸ್ಯೆನೂ ಸಮಸ್ಯೆ ಅಂದ್ಕೊಳ್ಳೇ ಬಾರದು. ಆಗ ಅವನು ನಿಜವಾದ ಮನುಷ್ಯ ಆಗೋದು. ಹಿಂದಿನ ಕಾಲದಲ್ಲಿ ಋಷಿಮುನಿಗಳು ವರ್ಷಗಟ್ಟಲೆ ತಪಸ್ಸು ಮಾಡ್ತಿದ್ರಲ್ಲ ಅವರು ಹಸಿವು ಅಂತಿದ್ದರಾ.

ಬಾಬು ಮಾತು ನಿಲ್ಲಿಸು ತಿನ್ನೋಕೆ ಏನಾದರೂ ಕೊಡು.

ಸುಬ್ಬಯ್ಯ ಈಗ ಒಂದು ಪಕ್ಷ ನಾನು ನಿನಗೆ ತಿನ್ನೋಕೆ ಏನೂ ಕೊಡದೇ ಇದ್ರೆ ಏನು ಮಾಡ್ತೀಯ.

ಬಾಬು ಏನು ಮಾಡ್ತೀನಾ? ಅದನ್ನ ಹೇಳೋಲ್ಲ. ಮಾಡಿ ತೋರಿಸ್ತೀನಿ.

ಸುಬ್ಬಯ್ಯ ಏನು ಮಾಡಿ ತೋರಿಸ್ತೀಯಾ? ನನ್ನನ್ನ ಹೆದರಿಸ್ತಿದೀಯಾ?

ಬಾಬು ನಿನ್ನನ್ನು ಹೆದರಿಸೋದೇ, ನಿಮ್ಮಪ್ಪನ್ನೂ ಹೆದರಿಸೋದೇ. ನನ್ನನ್ನು ಏನಂದ್ಕೊಂಡಿದೀಯ?

ಸುಬ್ಬಯ್ಯ ಅಂದ್ಕೊಳೋದೇನು ಬಂತು ನಿನ್ ಯೋಗ್ಯತೆ ನನಗೆ ಗೊತ್ತಿಲ್ವಾ?

ಬಾಬು ಬೇಡ ನನ್ನ ಕೆಣಕಬೇಡ. ನಾನೇನು ಮಾಡಬೇಕೋ ಅದನ್ನು ಮಾಡಿ ತೋರಿಸೇಬಿಡ್ತೀನಿ. ನೀನು ಆಗ ಬಾಯಿಬಡ್ಕೊಬೇಕು ಅಷ್ಟೆ

ಸುಬ್ಬಯ್ಯ ಅದೇನು ಬಡಾಯಿ ಕೊಚ್ಕೊತೀಯೋ. ಏನು ಮಾಡ್ತಿಯೋ ಮಾಡಿ ತೋರಿಸೊ

ಬಾಬು ಬೇಡ, ಬೇಡ ನನ್ನನ್ನ ಕೆಣಕಬೇಡ. ನೆನ್ನೆ ದಿನ ಗೋಪಿ ಇದೇ ರೀತಿ ಛಾಲೆಂಜ್ ಮಾಡ್ದ ಅವರ ಮನೇಲೂ ಇದನ್ನೇ ಮಾಡಿ ಬಂದಿದೀನಿ. ಈಗ ನಿನ್ನ ಮನೇಲೂ ಅದನ್ನೇ ಮಾಡ್ತೀನಿ.

ಸುಬ್ಬಯ್ಯ ಒಳ್ಳೆ ಕಥೆ ಆಯ್ತಲ್ಲ ನಿಂದು ನಿನ್ನ ಗೊಡ್ಡು ಬೆದರಿಕೆಗೆಲ್ಲ ಜಗ್ಗೋಲ್ಲ ನಾನು. ಅದೇನು ಮಾಡ್ಕೊತೀಯೊ ಮಾಡ್ಕೊ ಹೋಗೋಲೆ.

ಬಾಬು ಹಾಗಾ. ನೋಡ್ತಿರು. (ಹೆಗಲ ಮೇಲಿನ ಚೀಲದಿಂದ ಒಂದು ಪ್ಯಾಕೆಟ್ ತೆಗೆದು ಅದನ್ನು ಬಿಡಿಸಿ ತಿನ್ನೋಕೆ ಷುರು ಮಾಡ್ತಾನೆ).

ಸುಬ್ಬಯ್ಯ ಏನೋ ಅದು, ಏನೋ ತಿಂಡಿ ಪಾರ್ಸಲ್ ತಂದು ಮುಚ್ಚಿಟ್ಕೊಂಡು ನಮ್ಮನೆಗೆ ಬಂದು ಹಸಿವು ಅಂತ ನಾಟಕ ಆಡ್ತಿದ್ಯಾ?

ಬಾಬು ಇದಾ. ಇದು, ಮಸಾಲೆ ದೋಸೆ. ರಾತ್ರಿಗೆ ಅಂತ ಹೋಟೆಲಿನಲ್ಲಿ ಕಟ್ಟಿಸಿಕೊಂಡು ಬಂದಿದ್ದೆ ಅದನ್ನು ಈಗಲೇ ತಿನ್ನೋ ಹಾಗಾಯ್ತು. ಸಖತ್ತಾಗಿದೆ ದೋಸೆ.


ಸುಬ್ಬಯ್ಯ ಬಲು ನನ್ನ ಮಗ ನೀನು. ಅಲ್ಲಯ್ಯ ಕಂಕುಳಲ್ಲಿ ಮಗು ಇಟ್ಕೊಂಡು ಊರೆಲ್ಲ ಹುಡುಕಿದರು ಅನ್ನೋ ಹಾಗೆ ಚೀಲದಲ್ಲಿ ಮಸಾಲೆ ದೋಸೆ ಇಟ್ಕೊಂಡು ಹಸಿವು ಹಸಿವು ಅಂತ ಹೊಡ್ಕೊತಾ ಇದ್ಯಲ್ಲ.

ಬಾಬು ಸಖತ್ ಜುಗ್ಗ ನನ್ನ ಮಗ ನೀನು. ನಿನ್ನತ್ರ ಏನೂ ಗಿಟ್ಟಿಸಿಕೊಳ್ಳೋಕೆ ಆಗಲ್ಲ ಅಂತ ಶಿವು ನನ್ನ ಹತ್ರ ಛಾಲೆಂಜ್ ತಗೊಂಡಿದ್ದ. ನಾನೇ ಗೆಲ್ತೀನಿ ಅಂತ ನಾನೂ ಛಾಲೆಂಜ್ ತಗೊಂಡು ಬಂದಿದ್ದೆ. ಆದ್ರೆ ನಿನ್ನನ್ನ ಗೆಲ್ಲೋಕೆ ಆಗಲಿಲ್ಲ. ನೀನು ಪ್ರೂವ್ ಮಾಡಿಬಿಟ್ಟೆ

ಸುಬ್ಬಯ್ಯ ಏನಂತ?

ಬಾಬು ನೀನೊಬ್ಬ ಮಹಾನ್ ಜುಗ್ಗಾನಂದಸ್ವಾಮಿ ಅಂತ.

✵




ತಿಳಿನಗೆಯ ಸಿಡಿಬಾಂಬ್

# ಮರೆವು

(ಹಾಸ್ಯ ಬರಹಗಳ ಸಂಗ್ರಹ)

**ಲೇಖಕರು:**

**ಶ್ರೀನಿವಾಸ ಕುಂಡಂತಾಯ**

ಕೌಸ್ತುಭ ಪ್ರಕಾಶನ
ಬೆಂಗಳೂರು 4

ಪುಟ 156, ಬೆಲೆ ರೂ. 85/-

ಯಾವ ತಿಣುಕಾಟವೂ ಇಲ್ಲದೆ ಸರಳವಾಗಿ ಸಹಜವಾಗಿ ಬರೆಯುತ್ತಾರೆ ಕುಂಡಂತರಾಯರು. ಚೆನ್ನಾಗಿ ಹರಟೆ ಕೊಚ್ಚುತ್ತಾರೆ. ಪದಗಳನ್ನು ಸಮಯೋಚಿತವಾಗಿ ಸಂದರ್ಭೋಚಿತವಾಗಿ ಬಳಸುತ್ತಾರೆ. ವ್ಯಕ್ತಿಗಳ ವಿಚಿತ್ರ ವರ್ತನೆಯನ್ನು ವಿಡಂಬಿಸುತ್ತಾರೆ. ಲಘುವಾಗಿ ಛೇಡಿಸುತ್ತಾರೆ. ಎಲ್ಲ ಕಡೆ ತಿಳಿನಗೆಯ ಸಿಡಿಬಾಂಬನ್ನು ಸಿಡಿಸುತ್ತಾರೆ. ಅಲ್ಲಿ ಇಲ್ಲಿ ಸಣ್ಣ ಸಂದೇಶವನ್ನೂ ತುರುಕಿಸುತ್ತಾರೆ. ಹಾಸ್ಯ ಸಾಹಿತ್ಯದಲ್ಲಿ ಶ್ರೇಷ್ಠತೆಯನ್ನು ಸಾಧಿಸಬೇಕೆನ್ನುವ ತುಡಿತವನ್ನು ತೋರಿಸುತ್ತಾರೆ. ಅವರೇ ಹೇಳುವಂತೆ ನಗೆಬರಹ ಬರೆದು ಓದುಗರನ್ನು ನಗಿಸುವುದು ಪುಣ್ಯ ಕಾರ್ಯಗಳಲ್ಲೊಂದು. ಈ ಪುಣ್ಯ ಕಾರ್ಯವನ್ನು ಕುಂಡಂತಾಯರು ಸರಾಗವಾಗಿ ಮಾಡುತ್ತಲೇ ಇದ್ದಾರೆ.

ಒಬ್ಬ ಹಾಸ್ಯ ಬರಹಗಾರನಿಗೆ ತನ್ನ ಸುತ್ತಮುತ್ತಲಿನ ಬದುಕೇ ಒಂದು ಆಸ್ತಿ. ಯಾವ ವಸ್ತುವನ್ನು ಆರಿಸಿಕೊಂಡರೂ ಸಮರ್ಥವಾಗಿ ಬರೆಯುವ ಸಾಧ್ಯತೆ ಇದೆ. ಕುಂಡಂತಾಯರು ತಾವು ಕಂಡದ್ದನ್ನೇ ಅನುಭವಿಸಿದ್ದನ್ನೇ ತಮ್ಮದೇ ಭಾಷೆಯಲ್ಲಿ ಶೈಲಿಯಲ್ಲಿ ಸುಂದರವಾಗಿ ನಿರೂಪಿಸುವ ಪ್ರಯತ್ನವನ್ನು ಮಾಡಿದ್ದಾರೆ. ರೇಡಿಯೊ, ಮೊಬೈಲ್, ಟಿವಿ, ಸಿನೆಮಾ, ನಾಟಕ, ಸಭೆ, ಸಮಾರಂಭಗಳು, ಮಾತುಕತೆಗಳು ಎಲ್ಲವೂ ಕುಂಡಂತಾಯರನ್ನು ಆಕರ್ಷಿಸಿವೆ. ಅವರ ಬರಹಗಳನ್ನು ಓದಿಯೇ ಆಸ್ವಾದಿಸಬೇಕು. ಆ ಆನಂದ ಓದುಗರಾದ ನಿಮ್ಮದಾಗಲಿ. ಕುಂಡಂತಾಯರ ಈ ಪುಣ್ಯ ಕಾರ್ಯ ನಿರಂತರವಾಗಿ ಸಾಗಲಿ ಎಂದು ಹಾರೈಸುತ್ತೇನೆ.

**ಕು.ಗೋ.**

ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ